NANA FADANAVIS

ನಾ ನಾ ಫಡನವೀಸ

BY

R. H. DEŠAPÂNDE, M. A.

ow of the University of Bombay, and author of several Kannada Books

DHÂRAWÂDA.

1898

As.] [ಬೆಲೆ: ೨ ಆಣೆ.

ನಾನಾಫಡನವೀಸ.



೧೮ನೆಯ ಶತಕದ ಕೊನೆಯಲ್ಲಿ ದಕ್ಷಿಣಹಿಂದುಸ್ಥಾನದೊಳಗೆ ಮೂರೂವರೆ ಮಂದಿ ಜಾಣರಿದ್ದರೆಂಬ ಮಾತು ವಾಚಕರಿಗೆ ಗೊತ್ತಿರಬಹುದು. ಈಜಾಣರಾರೆಂದರೆ—೧ ಸಖಾರಾಮ. ಬಾಪು ಬೋಕಿಲ, ೧ ವಿಠ್ಠಲಸುಂದರ (ನಿಜಾಮನ ಮಂತ್ರಿ), ೧ ದೇವಾಜಿಪಂತ (ಭೋಸಲೆಯನ ವಕೀಲ), ೧/೨ ನಾನಾಫಡನವೀಸ. ಕಡೆ. ಯವನಾದ ನಾನಾಫಡನವೀಸನು ಅರೆಜಾಣನೆಂದು ಆಗಿನ ಕಾಲದ ಮುತ್ಸದ್ದಿಗಳ ಅಭಿಪ್ರಾಯವಿತ್ತು. ಇವನು ಏನು ಕಾರಣ ಜಾಣರ ಪಟ್ಟಿಯಲ್ಲಿ ಸೇರಿಸಲ್ಪಟ್ಟನೆಂಬದೂ ಇವನು ಏನು ಕಾರಣ

ಅರೆಜಾಣನೆಂದು ಕರೆಯಲ್ಪಟ್ಟನೆಂಬದೂ ಮುಂದಿನ ಚರಿತ್ರದಿಂದ ಸ್ಪಷ್ಟವಾಗಿ ತಿಳಿಯುವದು.

ಪೇಶ್ವೆಯರ ಮೂಲಪುರುಷನಾದ ಬಾಳಾಜಿ ವಿಶ್ವನಾಥನು ಅಂಜನವೇಲದಲ್ಲಿ ಹಬಸಿಯರ ಸೆರೆಯಾಳಾದಾಗ ವೇಳಾಸದಲ್ಲಿದ್ದ ತ್ರಿವರ್ಗಭಾನುಗಳು—ಹರಿ, ಬಾಳಾಜಿ, ರಾಮಾಜಿ—ತಮ್ಮ ಹಿರಿಯರಿಂದ ನಡೆದು ಬಂದ ಋಣಾನುಭಂದವ ಸ್ಮರಿಸಿ ವಿಶ್ವಪ್ರಯತ್ನಮಾಡಿ, ಅವನನ್ನು ಕಾವಲಿನಿಂದ ಬಿಡಿಸಿದರು. ಮುಂದೆ ಬಾಳಾಜಿ ವಿಶ್ವನಾಥನು ಮೂರುಮಂದಿ ಭಾನುಗಳೊಡನೆ ಹಬಸಿಯರ ಕಾಟವನ್ನು ತಪ್ಪಿಸಿಕೊಳ್ಳಲಿಕ್ಕೆ ಸಾತಾರೆಗೆ ಹೋದನು; ಅಲ್ಲಿ ಇರಿರುತ್ತಾ ಶಾಹು ಮಹಾರಾಜನ ಒಲುಮೆಯನ್ನು ಸಂಪಾದಿಸಿ, ಪೇಶ್ವೆಯಾದ ಬಳಿಕ ತನ್ನ ಸಂಗಡಲಿದ್ದ ಹರಿಮಹಾದೇವಭಾನುವಿಗೆ ಫಡನವೀಸಿಯ ವಸ್ತ್ರಗಳನ್ನು ಕೊಡಿಸಿದನು.* ಹರಿಯು ಮುಂದೆ ೪-೫ ತಿಂಗಳಲ್ಲೇ ಮಕ್ಕಳಿಲ್ಲದೆ ತೀರಿಕೊಂಡುದರಿಂದ ಅವನ ತಮ್ಮನಾದ ಬಾಳಾಜಿಯು ಫಡನವೀಸನಾದನು (೧೭೧೪). ಈ ಬಾಳಾಜಿಯ ಮಗನಾದ ಜನಾರ್ದನನು ಮೇಂಧಳೆ ಮನೆತನದವಳಾದ ರಖುಮಾಬಾಯಿಯನ್ನು ಮದುವೆಯಾದನು. ಇವರಿಂದಲೇ ಮುಂದೆ ಹೆಸರಾದ ಬಾಳಾಜಿ ಜನಾರ್ದನ (ಊರ್ಫ ನಾನಾಫಡನವೀಸನು) ಸಾತಾರೆಯಲ್ಲಿ ಹುಟ್ಟಿದನು (೧೭೪೧).†

ನಾನಾನ ಬಾಲ್ಯದ ಸಂಬಂಧದಿಂದ ನಮಗೆ ಹೆಚ್ಚಿಗೇನೂ ಗೊತ್ತಾಗುವದಿಲ್ಲ. ಅವನ ತಂದೆಯು ಬಹುಶಃ ಪೇಶ್ವೆಯನ ಸಂಗಡ ಹೊರಗೆ ಇರುತ್ತಿದ್ದ ಕಾರಣ ಅವನು ತಾಯಿಯ ಮಾತು ಕೇಳದೆ ಸಿಕ್ಕ ಹಾಗೆ ಗೊಂದಲ ಹಾಕುವುದರಲ್ಲಿಯೂ ಪುರಾಣ-ಪುಣ್ಯಕಥೆಗಳನ್ನು ಕೇಳುವುದರಲ್ಲಿಯೂ ದೇವರ ಪೂಜೆಯಲ್ಲಿಯೂ ಕಾಲಕಳೆಯುತ್ತಿದ್ದನು. ಅವನು ಹೀಗೆ ಉಂಡಿಗನಾಗುವುದನ್ನು ನೋಡಿ,

---

*ಹಿಂದೆ ಪುಟ ೬೨ ನೋಡಿರಿ.

† ನಾನಾಫಡನವೀಸನು ಶಕೆ ೧೬೬೩ ದುರ್ಮತಿ ನಾಮಸಂವತ್ಸರ ಮಾಘವದ್ಯ ೪ ಶುಕ್ರವಾರ ಚಿತ್ರಾನಕ್ಷತ್ರ ರಾತ್ರಿ ೧೧ ಘಟಿಕೆ ೧೦ ಪಳೆಯಲ್ಲಿ ಹುಟ್ಟಿದನು.

ನಾನಾಸಾಹೇಬ ಪೇಶ್ವೆಯುನ ಕಕ್ಕನ ಮಗನಾದ ಸದಾಶಿವರಾಯನು ಅವನನ್ನೂ ಅವನ ಕಕ್ಕನ ಮಗನಾದ ಮೋರೋಬನನ್ನೂ ನಾನಾಸಾಹೇಬನ ಮಕ್ಕಳಾದ ವಿಶ್ವಾಸರಾವ-ಮಾಧವರಾವರೊಡನೆ ವಿದ್ಯಾಭ್ಯಾಸ ಮಾಡಲಿಕ್ಕಿಟ್ಟನು.

ಆಕಾಲದ ಶಿಕ್ಷಣವು ಈಗಿನಿಂದ ತೀರ ಭಿನ್ನವಾಗಿತ್ತು. ಆಗಿನ ಜನರು ತಮ್ಮ ಮನೆತನದ ಹೋರೆಗಳನ್ನು ಬಿಟ್ಟು, ಸರಕಾರದ ಕೆಲಸಗಳಿಗೆ ಹಂಬಲಿಸಿ ನಿರುದ್ಯೋಗಿಗಳಂತೆ ಕೆಲಸಬೇಕೆಂದು ಸರಕಾರಕ್ಕೆ ಅರ್ಜಿಗಳನ್ನು ಮಾಡುವುದರಲ್ಲಿಯೂ ಅಧಿಕಾರಿಗಳ ಮನೆಗೆ ಮಚ್ಚೆಹರಿಯುವ ಸುದ್ದಿಯಿಲ್ಲದೆ ಎಡೆತಾಕುವುದರಲ್ಲಿಯೂ ತಮ್ಮ ಅಮೌಲ್ಯವಾದ ಆಯುಷ್ಯವನ್ನು ಪೋಲುಗಳೆಯುತ್ತಿದ್ದಿಲ್ಲ; ಮತ್ತು ಧರ್ಮಶ್ರದ್ಧೆಯಿಲ್ಲದವರಾಗಿ ಸುಳ್ಳುಕೆಲಸಗಳಿಂದ ನ್ಯಾಯಾಧಿಕಾರಿಗಳನ್ನು ದಣಿಸುತ್ತಿದ್ದಿಲ್ಲ. ಆಗ ಬ್ರಾಹ್ಮಣಬಾಲಕರು ಬ್ರಾಹ್ಮಣ್ಯಕ್ಕೆ ಅವಶ್ಯವಾದ ರುದ್ರಪವಮಾನ ಮುಂತಾದ ಕೆಲವು ಮಂತ್ರಗಳನ್ನೂ ಓದುಬರಹವನ್ನೂ ಕಲಿಯುತ್ತಿದ್ದರು. ಆದ್ದರಿಂದ ಸದಾಶಿವರಾವ ಮುಂತಾದ ನಾಲ್ವರು ಮಂತ್ರಗಳನ್ನೂ ಓದುಬರಹವನ್ನೂ ಕಲಿತುದಲ್ಲದೆ, ಕುದುರೆಯೇರುವುದನ್ನೂ ಕತ್ತಿ-ಡಾಲು-ತುಬಾಕಿಗಳ ಉಪಯೋಗವನ್ನೂ ಗೊತ್ತುಮಾಡಿಕೊಂಡರು.

ನಾನಾನು ದಷ್ಟಪುಷ್ಟನಿಲ್ಲದಿದ್ದರೂ ಚುರುಕುಬುದ್ಧಿಯುವನಾಗಿದ್ದನು. ಅವನ ನಮ್ರತೆಯೂ ಚುರುಕತನವೂ ಎಲ್ಲ ಜನರ ಮನಸ್ಸನ್ನು ಎಳೆಕೊಂಡುದಲ್ಲದೆ, ಅವನ ತಮ್ಮನಾದ ಮೋರೋಬನ ಹೊಟ್ಟೆಕಿಚ್ಚನ್ನು ಹೆಚ್ಚಿಸಿದವು. ಆದ್ದರಿಂದ ಅವರೊಳಗೆ ಬಾರಿಬಾರಿಗೆ ಮಾಸೆಯಾಟವಾಗುತ್ತಿತ್ತು. ಒಂದು ದಿನ ಅವರಿಬ್ಬರು ಕುದುರೆಗಳನ್ನು ತಿರುವಿಯಾಡುವಾಗ ಮೋರೋಬನು ಸಿಟ್ಟಿಗೆದ್ದು, ಅವನನ್ನು ಕುದುರೆಯಿಂದೆಳೆದು, ಕೆಡವಿ, ಮೆಯ್ಯುಹಣ್ಣಾಗುವಂತೆ ಹೊಡೆದನು. ಈನೋವಿನಿಂದ ನಾನಾನಿಗೆ ಮುಂದೆ ಎಷ್ಟೋ ದಿವಸ ಹಾಸಿಗೆ ಹಿಡಿದು ಮಲಗಿಕೊಳ್ಳಬೇಕಾಯಿತು!!*

---

* ಇದಕ್ಕೂ ಬಹಳೇ ಮೊದಲು ಅಂದರೆ ೧೭೫೧ರಲ್ಲಿ ಗದ್ರೆಮನೆತನದವಳಾದ ಯಶೋದಾಬಾಯಿಯೊಡನೆ ನಾನಾನ ಲಗ್ನವಾಯಿತು.

ನಾನಾನು ೧೫ ವರ್ಷದವನಿದ್ದಾಗ ಅವನಿಗೊಂದು ದೊಡ್ಡ ಸಂಕಟವೊದಗಿತು. ಅದೇನಂದರೆ, ಅವನ ತಂದೆಯಾದ ಜನಾರ್ದನ ಬಲ್ಲಾಳ ಫಡನವೀಸನು ರಘುನಾಥರಾವ ದಾದಾನ ಸಂಗಡ ದಂಡಿನೊಡನೆ ಹೋದಾಗ ನರ್ಮದೆಯ ಉತ್ತರದಲ್ಲಿ ತನಗಿದ್ದ ಹೊಟ್ಟೆಸೂಲಿಯ ಬೇನೆಯಿಂದ ಮಡಿದನು (ಶಕೆ ೧೬೭೮). ನಾವು ನಮ್ಮ ಹೆಂಗಸರಿಗೆ ಹೆಚ್ಚು ವಿದ್ಯವನ್ನು ಕಲಿಸದೆ ಇರುವದರಿಂದಲೂ ಅವರಿಗೆ ಹೆಚ್ಚು ಸ್ವಾತಂತ್ರ್ಯ ಕೊಡದ್ದರಿಂದಲೂ ಮನೆಯ ಒಡೆಯನು ಅಕಾಲಮರಣ ಹೊಂದಿದ ಕೂಡಲೆ ಉಳಿದವರ ತಾರುಂಬಳಿಯು ಎಷ್ಟು ಆಗುತ್ತದೆಂಬದನ್ನು ವಾಚಕರೇ ಊಹಿಸಬಹುದು. ರಖುಮಾಬಾಯಿಯು ಯಥಾರ್ಥವಾದ ಅಬಲೆಯು; ನಾನಾನು ಚಿಕ್ಕ ಹುಡುಗನು. ಮನೆಯಲ್ಲಿ ಉತ್ಥಾಪಕರಾರೂ ಇದ್ದಿಲ್ಲ. ಇಂತಹ ಸ್ಥಿತಿಯಲ್ಲಿದ್ದ ಹುಡುಗರು ಉಂಡಿಗರಾಗುವದು ಸ್ವಾಭಾವಿಕವೇ ಸರಿ. ಆದರೆ ಸುದೈವದಿಂದ ನಾನಾನಿಗೆ ಪೇಶ್ವೆಯರ ಆಸರವಿತ್ತು. ಆದ್ದರಿಂದ ಆಕಾಲಕ್ಕೆ ಪೇಶ್ವೆಯನಾದ ನಾನಾಸಾಹೇಬನು ಈ ಚಿಕ್ಕ ನಾನಾನಿಗೆ ಫಡನವೀಸಿಯ ವಸ್ತ್ರಗಳನ್ನು ಕೊಟ್ಟು, ಅವನಿಂದ ಆದಷ್ಟು ಕೆಲಸ ತೆಗೆದುಕೊಳ್ಳಲಾರಂಭಿಸಿದನು; ಮತ್ತು ಮುಂದೆ ಕೆಲವು ದಿವಸಗಳ ಮೇಲೆ ಅವನನ್ನು ತನ್ನ ಸಂಗಡ ಕರೆದುಕೊಂಡು ಮೈಸೂರಿನ ಮೇಲೆ ದಂಡೆತ್ತಿ ಹೋದನು (ಶಕೆ ೧೬೭೯). ಇದೇ ನಾನಾನ ಮೊದಲಿನ ಪ್ರವಾಸವು; ಮತ್ತು ಇದೇ ವರ್ಷವೇ ಇಂಗ್ಲಿಷ-ರಾಜ್ಯಸ್ಥಾಪನೆಯ ಸಮೀಪಕಾರಣವಾದ ಪ್ಲಾಸಿಯ ಕದನವಾಯಿತು. ಆಕಾಲಕ್ಕೆ ಆಂಗ್ಲರು ಈಭರತಖಂಡದ ಸಾಮ್ರಾಜ್ಯವನ್ನೆಯ್ದುವರೆಂಬ ವಿಚಾರವು ಒಬ್ಬರ ಮನಸ್ಸಿನಲ್ಲಾದರೂ ಬಂದಿರಬಹುದೇ?

ಮುಂದೆ ಮೂರು ವರ್ಷಗಳ ವರೆಗೆ ಹೆಚ್ಚಿನಾವ ಸಂಗತಿಯೂ ಒದಗಲಿಲ್ಲ. ನಾನಾನಿಗೂ ಮೋರೋಬನಿಗೂ ಕೂಡಿಬಾರದ್ದರಿಂದ ಮನೆತನದ ಹಿರಿಯನಾದ ಬಾಬೂರಾವ ರಾಮಚಂದ್ರನು ಪಿತ್ರಾರ್ಜಿತ ಆಸ್ತಿಯನ್ನು ಇಬ್ಭಾಗಿಸಿ, ಒಂದು ಭಾಗವನ್ನು ನಾನಾನಿಗೊಪ್ಪಿಸಿದನು.

ಇ. ಸ. ೧೭೬೦-೧೭೬೧ ಈಯೆರಡು ವರ್ಷಗಳು ಪೇಶ್ವೆಯರ ಇತಿಹಾಸದಲ್ಲಿ ಬಲು ಹೆಸರಾದವು. ಮೊದಲನೆಯ ವರ್ಷದಲ್ಲಿ ಪೇಶ್ವೆಯು ಉದಯಗಿರಿಯಲ್ಲಿ ನಿಜಾಮನ ದಂಡನ್ನು ಮುರಿಬಡಿದು, ಜಯಭೇರಿಯನ್ನು ಹೊಡಿಸುತ್ತಾ ಪುಣೆಗೆ ತಿರುಗಿ ಬಂದು, ಸಂತೋಷಸಾಗರದಲ್ಲಿ ಮುಳುಗಿದನು. ಆದರೆ ಮುಂದಿನ ವರ್ಷ ತನ್ನ ದಂಡೂ ಕಲಿಗಳಾದ ದಳವಾಯಿಗಳೂ ಪ್ರೀತಿಯ ಆಪ್ತರೂ ಅಬ್ದಾಲಿಯೆಂಬ ಹೆಬ್ಬುಲಿಯ ಪಂಜರದ ಹೊಡತಕ್ಕೆ ಸಿಲುಕಿ ಒದ್ದಾಡಿ, ಅವನ ತುತ್ತುಗಳಾಗುವರೆಂಬ ವಿಚಾರವು ಆಕಾಲದ ಜನರ ಕನಸುಮನಸ್ಸಿನಲ್ಲಿಯಾದರೂ ಬಂದಿರಲಿಕ್ಕಿಲ್ಲವಲ್ಲ!! ಮನುಷ್ಯನು ಬಯಸುವದೊಂದು ದೇವರು ಮಾಡುವದು ಮತ್ತೊಂದು ಎಂಬ ಗಾದೆಯಂತೆ ಪೇಶ್ವೆಯು ತನ್ನ ಗೆಲವಿನಿಂದುಂಟಾದ ಆನಂದದ ಮಬ್ಬಿನಿಂದ ಎಚ್ಚರವಾಗಿ ನೋಡುವಷ್ಟರಲ್ಲಿ ತಾನು ಮೊದಲು ಮುಳುಗಿ ಉರುಳಾಡುವ ಸಂತೋಷಸಾಗರವು ಅತ್ಯಗಾಧವಾದ ದುಃಖಸಮುದ್ರವಾಗಿತ್ತು! ಅದು ಹೇಗಂದರೆ:—

೧೭೫೭ನೆಯ ಇಸವಿಯು ಪೇಶ್ವೆಯರ ಇತಿಹಾಸದಲ್ಲಿ, ಅದೇಕೆ, ನಮ್ಮ ಭರತಖಂಡದ ಇತಿಹಾಸದಲ್ಲಿ ಬಲುಹೆಸರಾದ ವರ್ಷವೆಂಬದು ವಾಚಕರಿಗೆಲ್ಲಾ ಗೊತ್ತಿರುವದು. ಇದೇ ವರ್ಷ ಇಂಗ್ಲಿಷರು ತಮ್ಮ ಸಾಮ್ರಾಜ್ಯದ ಬೀಜಾರೋಪಣವನ್ನು ಪಲಸಿಯೆಂಬೂರಲ್ಲಿ ಮಾಡಿದರು. ಇದೇ ವರ್ಷ ನಾನಾಸು ಪೇಶ್ವೆಯನ ಫಡನವೀಸನಾದನು; ಮತ್ತು ಇದೇ ಸುಮಾರಿಗೆ ಪೇಶ್ವೆಯನ ಕಕ್ಕನ ಮಗನಾದ ರಘುನಾಥರಾಯನು ನಾಮಶೇಷನಾದ ದಿಲ್ಲಿಯ ಬಾದಶಹನ ಮಂತ್ರಿಯಾದ ಮೀರಸಾಬುದ್ದೀನನ ಪಕ್ಷಹಿಡಿದು ಅವನ ವಿರೋಧಿಯಾದ ವಜೀಬುದ್ದೌಲನನ್ನು* ದಿಲ್ಲಿಯಿಂದೋಡಿಸಿ, ಪಂಜಾಬದಲ್ಲಿ ರಾಜದ್ರೋಹಿಯಾದ ಅಡಿನಾ ಬೇಗನೆಂಬವ.

---

* ಕಂದಹಾರ ಅರಸನಾದ ಅಹಮ್ಮದಶಹಾ ಅಬ್ದಾಲಿಯು ಇವನನ್ನು ದಿಲ್ಲಿ ಬಾದಶಹನ ಮೀರಬಕ್ಷಿಯನ್ನು ಮಾಡಿ ಅವನಿಗೆ ಅಮೀರ-ಉಲ್-ಉಮರಾಯೆಂಬ ಬಿರುದನ್ನು ಕೊಟ್ಟು ಸ್ವದೇಶಕ್ಕೆ ತೆರಳಿದನು (೧೭೫೬).

ನಿಗೆ ನೆರವಾಗಲಿಕ್ಕೆ ಹೋದನು (೧೭೫೭). ಬಳಿಕ ರಘುನಾಥ ರಾಯನು ಅಬ್ದಾಲಿಯ ಕಯ್ಕೆಳಗಿನವನಾದ ಸರಹಿಂದದ ಸರಸು ಬೇದಾರನನ್ನು ನೆರೆಸೋಲಿಸಿ, ಅಬ್ದಾಲಿಯೆಂಬ ಹುಲಿಯನ್ನು ಕೆಣಕಿ, ತನ್ನ ಆಶ್ರಿತನಾದ ಅಡಿನಾ ಬೇಗನನ್ನು ಮುಲ್ತಾನ ಲಾಹೋರಗಳ ಸರಸುಬೇದಾರನನ್ನು ಮಾಡಿ, ಸಾಬಾಜಿಯೆಂಬ ದಳವಾಯಿಯನ್ನು ಲಾಹೋರದಲ್ಲಿಯೂ ಸಿಂದೆಹೋಳಕರರನ್ನು ಮಾಳವದಲ್ಲಿಯೂ ಸಿಂದೆಜಯಪ್ಪನನ್ನು ದಿಲ್ಲಿಯಲ್ಲಿಯೂ ಇಟ್ಟು, ತಾನು ಪುಣೆಗೆ ತಿರುಗಿ ಬಂದನು (೧೭೫೮).

ಈಕಾಲಕ್ಕೆ ದಿಲ್ಲಿಯಲ್ಲಿ ೨ನೆಯ ಅಲಮ್‌ಗೀರನು* ಆಳುತ್ತಿದ್ದನು. ಅವನು ತನ್ನ ವಜೀರನ ವಿರುದ್ಧವಾಗಿ ಅಬ್ದಾಲಿಯೊಡನೆ ಸಂಚು ನಡಿಸಿದ್ದರಿಂದ ಆವಜೀರನು ಸಿಟ್ಟಿಗೆದ್ದು, ಅಲಮ್‌ಗೀರನನ್ನು ಕೊಲ್ಲಿಸಿ, ಅವರಂಗಜೇಬನ ಮೊಮ್ಮಗನಾದ ಶಹಾಜಹಾನನನ್ನು ಪಟ್ಟದ ಮೇಲೆ ಕುಳ್ಳಿರಿಸಿದನು. ಮರಾಟರ ಹಾವಳಿಯನ್ನೂ ಮಿರಶಾಬುದ್ದೀನನ ಪುಂಡಾಟವನ್ನೂ ನಜೀಬುದ್ದೌಲನ ಹಯರಾಣವನ್ನೂ ಕೇಳಿ ಅಬ್ದಾಲಿಯು ಕನಲ್ದು ಕೆಂಡಾಗಿ ದೊಡ್ಡ ದಂಡಿನೊಡನೆ ಪಂಜಾಬವನ್ನೊಳನುಗ್ಗಿದನು. ಸಾಬಾಜಿಯು ಪಲಾಯನ ಮಂತ್ರವನ್ನು ಜಪಿಸಲಾರಂಭಿಸಿದ್ದರಿಂದಲೂ ಸಿಂದೆಹೋಳಕರರು ಅವನಿಗೆ ನೆರವಾಗಲಿಕ್ಕೆ ಬಾರದ್ದರಿಂದಲೂ ಅಬ್ದಾಲಿಯು ಏನೂ ಅಡ್ಡಿಯಿಲ್ಲದೆ ದಿಲ್ಲಿಯ ವರೆಗೆ ಬಂದು, ಆವೂರ ಹತ್ತರ ಯಮುನಾ ನದಿಯನ್ನು ದಾಟಿ, ಸಿಂದೆದತ್ತಾಜಿಯ ದಂಡನ್ನು ಕೆಣಕಿ, ಅದನ್ನು ನೆರೆಸೋಲಿಸಿದನು. ಈಸುದ್ದಿಯನ್ನು ಕೇಳಿ ಹೋಳಕರನು ಹಿಂಜರಿದು ಸಿಕಂದರಕ್ಕೆ ಹೋಗಲು, ಅವನನ್ನು ಬೆನ್ನಟ್ಟಿದ ಅಬ್ದಾಲಿಯ ದಂಡು ಅವನನ್ನು ಅಲ್ಲೇ ಮುರಿಬಡಿಯಿತು (೧೭೬೦).

ಈಕಡುಕೆಟ್ಟ ಸುದ್ದಿಯನ್ನು ಕೇಳಿ ಪೇಶ್ವೆಯು ಎಚ್ಚತ್ತನು. ತುಸು ದಿವಸಗಳ ಹಿಂದೆ ನಿಜಾಮನನ್ನು ಉದಯಗಿರಿಯ ಕಾಳಗ

*ಈಯಲಮ್ಗಾರನ ಮಗನಾದ ಅಲ್ಲಿ ಗೋಹುರನು ಶಹಾ ಅಲಮ್ಮನೆಂಬ ಹೆಸರಿನಿಂದ ಮಿರಕಾಶಿಮನ ಪಕ್ಷ ಹಿಡಿದು ಇಂಗ್ಲಿಷರೊಡನೆ ಹೋರಾಡಿದನು. ಬಕಾರದ ಕಾಳಗದಲ್ಲಿ ಸೋತವನು ಇವನೇ (೧೭೬೪).

ದಲ್ಲಿ ಮುರಿಬಡಿದ ಸಂತೋಷವು ಒಮ್ಮೆಲೆ ಕಡಮೆಯಾಯಿತು. ತಮ್ಮ ಪೂರ್ವಜರು ಇಷ್ಟು ದಿವಸ ಪ್ರಯತ್ನಮಾಡಿ ಉತ್ತರಹಿಂದುಸ್ಥಾನದಲ್ಲಿ ದೊರಕಿಸಿದ ಕೀರ್ತಿಯು ಹೋಗುವ ಹೊತ್ತು ಬಂತೆಂದು ತೋರಲಾರಂಭಿಸಿತು. ಆದ್ದರಿಂದ ಪೇಶ್ವೆ ನಾನಾಸಾಹೇಬನು ವಿಶ್ವಪ್ರಯತ್ನದಿಂದ ಅಬ್ದಾಲಿಯನ್ನು ಈದೇಶದಿಂದ ಓಡಿಸಬೇಕೆಂದು ಸಂಕಲ್ಪಮಾಡಿ, ದಂಡಯಾತ್ರೆಯ ಜೋಡಣೆಯನ್ನು ಮಾಡಲಾರಂಭಿಸಿದನು. ಕೂಡಲೆ ೨೦,೦೦೦ ಸ್ವಾರರೂ ೧೦,೦೦೦ ಉಳಿದ ದಂಡಾಳುಗಳೂ ತೋಫಖಾನೆಯೂ ಸಿದ್ಧವಾಯಿತು. ಪೇಶ್ವೆಯನ ಚಿಗಪ್ಪನ ಮಗನಾದ ಸದಾಶಿವರಾವಭಾವು ಎಂಬವನು ಈದಂಡಿನ ಮುಖ್ಯದಳವಾಯಿಯಾಗಿ ನಿಯಮಿಸಲ್ಪಟ್ಟನು. ಅವನ ಸಂಗಡ ಪೇಶ್ವೆಯನ ಹಿರಿಮಗನಾದ ವಿಶ್ವಾಸರಾಯನೂ ಬಳವಂತರಾವ ಮೇಂಧಳೆ, ಸಮಶೇರ ಬಹದ್ದೂರ, ನಾರೋಶಂಕರ (ರಾಜಾಬಹದ್ದೂರ), ವಿಠ್ಠಲರಾವ ವಿಂಚೂರಕರ, ತ್ರಿಯಂಬಕರಾವ ಪುರಂಧರೆ ಮುಂತಾದ ಸರದಾರರು ಭಾವುವಿನ ಸಂಗಡ ಹೋಗಲಿಕ್ಕೆ ಸಿದ್ಧರಾದರು.

ಈಯಟೋಕಾಟ ಸಿದ್ಧತೆಯನ್ನು ನೋಡಿ ನಾನಾಫಡನವೀಸನ ಮನಸ್ಸಿನಲ್ಲಿ ತಾನೂ ಆದಂಡಿನೊಡನೆ ಹೋಗಬೇಕೆಂಬ ಬುದ್ಧಿಯು ಹುಟ್ಟಿತು. ಅವನ ಉದ್ದೇಶವು ಕಾಳಗದಲ್ಲಿ ಕಲಿತನ ತೋರಿಸಬೇಕೆಂದಿದ್ದಿಲ್ಲ; ಆದರೆ ಆಜನಸಮುದಾಯದೊಡನೆ ಹೋಗಿ, ಉತ್ತರಹಿಂದುಸ್ಥಾನದಲ್ಲಿದ್ದ ದೊಡ್ಡ ದೊಡ್ಡ ಕ್ಷೇತ್ರಗಳನ್ನು ನೋಡಿ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ, ದೇಹಸಾರ್ಥಕ್ಯವನ್ನು ಮಾಡಿಕೊಳ್ಳುವದೇ ಅವನ ಮುಖ್ಯ ಉದ್ದೇಶವಾಗಿತ್ತು. ಆದ್ದರಿಂದ ಅವನು ತನ್ನ ತಾಯಿ-ಹೆಂಡತಿಯರನ್ನು ಸಂಗಡ ಕರೆದುಕೊಂಡು, ಆದಂಡಿನೊಡನೆ ಯಾತ್ರೆಗೆ ಹೊರಟನು!!

ಭಾವುಸಾಹೇಬನು ನಾನಾನ ಮೇಲೆ ಬಹುಪ್ರೀತಿಯನ್ನು ಮಾಡುತ್ತಿದ್ದನು. ಆದ್ದರಿಂದ ಅವನು ಹಾದಿಯಲ್ಲಿ ನಾನಾನಿಗೆ ಆಮಶೌಚ ಹತ್ತಿದ್ದನ್ನು ಕಂಡು, ಅವನ ಇಚ್ಛೆಗನುಸರಿಸಿ ಪ್ರವಾಸ

ಮಾಡಿ ಮಥುರೆಗೆ ಬಂದು ಮುಟ್ಟಿದನು; ಆದರೆ ಅಲ್ಲಿ ಕೆಲಕಾಲ ಇರಬೇಕೆಂದು ನಾನಾನ ಮನಸ್ಸಿನಲ್ಲಿದ್ದುದರಿಂದ ಭಾವುಸಾಹೇಬನು ಅವನನ್ನು ಅಲ್ಲೇ ಬಿಟ್ಟು ತಾನು ಮುಂದೆ ಹೋದನು. ಇತ್ತ ನಾನಾನು ಆಕ್ಷೇತ್ರದಲ್ಲಿದ್ದ ಎಲ್ಲ ದೇವರ ದರ್ಶನ ತೆಗೆದುಕೊಂಡು, ಎಲ್ಲಾ ತೀರ್ಥಗಳಲ್ಲಿ ಸ್ನಾನಮಾಡಿ, ಕ್ಷೇತ್ರವಿಧಿಯನ್ನು ಮುಗಿಸಿಕೊಂಡು, ಸಾವಕಾಶವಾಗಿ ಹೊರಟು ದಿಲ್ಲಿಗೆ ಬಂದು ಭಾವುಸಾಹೇಬನನ್ನು ಕೂಡಿದನು.

ಭಾವುಸಾಹೇಬನು ಉದಯಗಿರಿಯ ಕಾಳಗದಿಂದ ಉಬ್ಬಿದ್ದರಿಂದಲೂ ಅವನಿಗೆ ಅನುಭವವು ಕಡಮೆಯಾದ್ದರಿಂದಲೂ ಅವನು ದಿಲ್ಲಿಯಲ್ಲಿ ಮಾಡಿದ ಅವಿಚಾರಕೃತ್ಯಗಳನ್ನೂ ಸುರಾಜಮಲ್ಲ, ಹೋಳಕರ ಮುಂತಾದ ಅನುಭವಿಕ ಸರದಾರರ ಆಲೋಚನೆಗಳನ್ನು ಕೇಳದೆ ಮನಸ್ಸಿಗೆಬಂದಂತೆ ನಡೆದು ದಂಡನ್ನು ಹಾಳುಮಾಡಿಕೊಂಡದ್ದನ್ನೂ ಇಲ್ಲಿ ವರ್ಣಿಸುವುದು ಅವಶ್ಯವಿಲ್ಲ*. ಏಕೆಂ

* ಈ ದಂಡಯಾತ್ರೆಯಲ್ಲಿ ಭಾವುಸಾಹೇಬನು ಮಾಡಿದ ತಪ್ಪುಗಳು ಕೆಳಗೆ ಬರೆದಂತೆ ಇರುತ್ತವೆ:—೧. ಉದಯಗಿರಿಯ ಗೆಲವಿನಿಂದ ಭಾವುಸಾಹೇಬನು ಸೊಕ್ಕಿಗೆ ಬಂದಿದ್ದನು. ೨. ಅವನು ಮೊದಲಿನ ಮರಾಟರ ಸಾದೆತನವನ್ನು ಬಿಟ್ಟು ಮೊಗಲರ ಆಟ್ಟಹಾಸಕ್ಕೆ ಮೆಚ್ಚಿದ್ದನು. ೩. ಮರಾಟರ ಮೊದಲಿನ ಯುದ್ಧಸಾಂಪ್ರದಾಯವು ಹಗೆಗಳು ಕಸುವುಳ್ಳವರಿದ್ದರೆ, ಅವರಿಗೆ ಇದುರಾಗದೆ ಅವರ ಸಾಮಗ್ರಿಗಳನ್ನು ಹಾಳುಮಾಡುವುದೂ ತುಸು ಜನರು ಸಿಕ್ಕರೆ ಅವರನ್ನು ಕೆಣಕುವುದೂ ಆಗಿತ್ತು. ಭಾವುಸಾಹೇಬನು ಆಸಾಂಪ್ರದಾಯವನ್ನು ಬಿಟ್ಟು, ತನ್ನ ದಂಡಿನವರು ಕವಾಯತ ಕಲಿತವರೆಂಬ ಹೆಮ್ಮೆಯಿಂದ ಶತ್ರುಗಳಿಗಿದುರಾದನು. ೪. ಸುರಾಜಮಲ್ಲನ ಹಿತದ ಆಲೋಚನೆಯನ್ನು ಕೇಳದೆ ಅವನನ್ನು ಸಿಟ್ಟಿಗೆಬ್ಬಿಸಿ ಕಳಿಸಿಬಿಟ್ಟನು. ೫. ಹೋಳಕರ ಮುಂತಾದ ಅನುಭವಿಕ ಸರದಾರರ ಮನಸ್ಸನ್ನು ನೋಯಿಸಿದನು. ೬. ಪಾಣಿಪತದಲ್ಲಿ ತನ್ನ ಪಾಳಯದ ಸುತ್ತಲು ಖಂದಕವನ್ನು ಅಗಿಸಿ, ಪ್ರಸಂಗ ಬಿದ್ದಾಗ ತನ್ನ ದಂಡಿಗೆ ಹೊರಗೆ ಹೋಗಲಿಕ್ಕೆ ಬಾರದಂತೆ ಮಾಡಿಕೊಂಡನು. ೭. ಹಿಂದೆ ದಂಡನ್ನು ಕಾದಿಡದೆ ತನ್ನ ಎಲ್ಲ ದಂಡನ್ನು ಕಾಳಗಕ್ಕೊಯ್ದನು. ೮. ಅಯೋಧ್ಯೆಯ ನವಾಬನಾದ ಸುಜಾವುದ್ದೌಲನ ಮೇಲೆ ಪೂರ್ಣವಿಶ್ವಾಸವಿಟ್ಟು, ಅವನಿಗೆ ಮೇಲಿಂದ ಮೇಲೆ ಪತ್ರಬರೆಯುತ್ತಿದ್ದನು, ಮತ್ತು ಸುಜಾವುದ್ದೌಲನು ಆಪತ್ರಗಳನ್ನು ಅಬ್ದಾಲಿಗೆ ತೋರಿಸಿ, ಅವನ ಅನುಮತಿಯಂತೆ ಉತ್ತರ ಬರೆಯುತ್ತಿದ್ದನು. ೯. ವಿಶ್ವಾಸರಾಯನು ಮಡಿದ ಕೂಡಲೆ ಧೈರ್ಯತಾಳಿ ವಿಚಾರದಿಂದ ನಡೆಯದೆ, ಹೋಳಕರನಿಗೆ "ಕುಟುಂಬದವರನ್ನು ಕಾಪಾಡು" ಎಂದು ಹೇಳಿ, ತಾನು ಹುಚ್ಚನಂತೆ ಹಗೆಗಳ ಮೇಲೆ ಹರಿದು ಹೋದನು.

ದರೆ ಈಗದ್ದಲದಲ್ಲಿ ನಮ್ಮ ಚರಿತ್ರದ ನಾಯಕನ ಅಂಗವು ಬಲು ತುಸುವಿತ್ತು. ಪೇಶ್ವೆಯ ಈಯುದ್ಧುತಸೇನೆಯನ್ನು ಹಾಳುಮಾಡಿದ ಹೆಸರಾದ ಪಾಣಿಪತದ ಕಾಳಗವು ಶಕೆ ೧೬೮೨ ಪೌಷಶುದ್ಧ ೮ಯ ದಿವಸವಾಯಿತು. ಆರಣಾಂಗಣದಲ್ಲಿ ಭಾವುಸಾಹೇಬನ ಹೆಂಡತಿಯು, ಮೇಂಢಳೆಯನ ಹೆಂಡತಿಯು, ನಾನಾನ ತಾಯಿ-ಹೆಂಡತಿಯರು ಮುಂತಾದ ಹಲವು ಹೆಂಗಸರು ಇದ್ದರು. ಅವರು ತಮ್ಮ ಗಂಡಂದಿರು ಮಡಿದುದನ್ನು ನೋಡಿ, ಆಕ್ರೋಶಮಾಡಿ ಉಳಿದ ದಂಡಿನವರನ್ನು ಕಂಗೆಡಿಸಿದರು. ಮೊದಲು ಮೇಂಢಳೆಯನು ಸತ್ತನು, ಬಳಿಕ ವಿಶ್ವಾಸರಾಯನು ಮಡಿದನು, ಕೊನೆಗೆ ಭಾವುಸಾಹೇಬನು ಕಾಣದಂತಾದನು.

ಈಕಾಳಗದಲ್ಲಿ ನಾನಾನು ಭಾವುಸಾಹೇಬನ ಹತ್ತರದಲ್ಲೇ ಇದ್ದನು. ಭಾವುಸಾಹೇಬನು ಕಣ್ಮರೆಯಾದ ಕೂಡಲೆ ಅವನು ರಣಭೂಮಿಯಿಂದ ಓಡಿ ಹೋಗಿ, ಉಡಿಗೆ-ತೊಡಿಗೆ-ಕುದುರೆಗಳನ್ನು ಬಿಟ್ಟು ಕಪ್ಪುವನ್ನು ಹಾಕಿಕೊಂಡು ಬೂದಿಯನ್ನು ಮೆಯ್ಗೆಲ್ಲ ಬಡಕೊಂಡು, ದಿನಾಲು ೧೦-೨೦ ಮೈಲು ನಡೆಯುತ್ತ, ಹಾದಿಯಲ್ಲಿ ಬಾರಿಯ ತಪ್ಪಲನ್ನು ತಿಂದು ಹಸಿವೆ ಹರಕೊಳ್ಳುತ್ತ ತೊಳಲಿ ಬಳಲಿ ಆಸತ್ತುಬೇಸತ್ತು ರೇವಡಿಯೆಂಬೂರಿಗೆ ಬಂದು ಮುಟ್ಟಿದನು. ಅಲ್ಲಿ ಕೆಲಗೃಹಸ್ಥರು ಅವನ ಆದರಾತಿಥ್ಯವನ್ನು ಚೆನ್ನಾಗಿ ಮಾಡಿದರು. ಅಲ್ಲಿರುವಾಗ ಅವನ ಹೆಂಡತಿಯಾದ ಯಶೋದಾಬಾಯಿಯು ಜಿಗನಿಗೆ ಸುರಕ್ಷಿತವಾಗಿ ಬಂದು ಮುಟ್ಟಿರುತ್ತಾಳೆಂದು ಸುದ್ದಿ ಬಂದುದರಿಂದ, ಅವನು ಅಲ್ಲಿಗೆ ಹೋದನು.* ಅಲ್ಲಿ ಕೆಲವು ದಿವಸ ನಿಂತು, ಬಳಿಕ ಅವನು ತನ್ನ ಹೆಂಡತಿಯೊಡನೆ ಹೊರಟು, ಡೀಗ-ಧೋಳಪುರಗಳ ಮೇಲೆ ಹಾಯ್ದು

---

*ತನ್ನ ತಾಯಿಯು ಪಾಣಿಪತದ ಕಾಳಗದಿಂದ ಓಡಿ ಹೋಗುವಾಗ ಹಾದಿಯಲ್ಲಿ ಕುದುರೆಯ ಮೇಲಿಂದ ಬಿದ್ದು ಸತ್ತಳೆಂಬ ಸುದ್ದಿಯು ನಾನಾನಿಗೆ ಜಗನಿಯಲ್ಲಿ ಹತ್ತಿತೆಂದು ಬರೆಯೆಂಬವರು ಬರೆಯುತ್ತಾರೆ. ಆದರೆ ಭಾವುಸಾಹೇಬನ ಬಖೈರಿನಲಿ ಶತ್ರುಗಳು ಆಕೆಯನ್ನು ಹಿಡಕೊಂಡು ಹೋದರೆಂದು ಲೇಖವಿದೆ.

ಗ್ವಾಲ್ಹೇರಕ್ಕೆ ಬಂದು, ಪಾರ್ವತಿಬಾಯಿ ನಾನಾಪುರಂಧರೆ ಮಲ್ಹಾರಜಿ ಹೋಳಕರ ಮುಂತಾದವರೊಡನೆ ನಾನಾಸಾಹೇಬನು ಆ ಕಾಲಕ್ಕೆ ಪಾಳಯವನ್ನು ಹಾಕಿಕೊಂಡಿದ್ದ ಬರ್ಹಾಣಪುರಕ್ಕೆ ಬಂದು ಮುಟ್ಟಿದನು.

ಈಕಾಲಕ್ಕೆ ನಾನಾನ ಮನಸ್ಸಿನಲ್ಲಿ ವೈರಾಗ್ಯ ಹುಟ್ಟಿದಂತೆ ತೋರುತ್ತದೆ. ಆದ್ದರಿಂದ ಅವನು ಕಾಶೀವಾಸಮಾಡಲಿಕ್ಕೆ ಪೇಶ್ವೆಯನ ಅಪ್ಪಣೆಯನ್ನು ಪಡೆದು, ಟೋಂಕಕ್ಕೆ ಹೋದನು. ಆದರೆ ಅಷ್ಟರಲ್ಲಿ ನಾನಾಸಾಹೇಬನಿಗೆ ಜೇರಾಗಿರುತ್ತದೆಂದು ಪತ್ರಬಂದುದರಿಂದ, ಅವನು ತಿರುಗಿ ಪುಣೆಗೆ ಬಂದನು (ಶಕೆ. ೧೬೮೩ ಜ್ಯೇಷ್ಠ). ಈಮೊದಲೇ ನಾನಾಸಾಹೇಬನು ತೀರಿಕೊಂಡುದರಿಂದ ಅವನ ಮಗನಾದ ಮಾಧವರಾಯನಿಗೆ ಪೇಶ್ವೆಯ ವಸ್ತ್ರಗಳು ದೊರೆದವು (ಶ್ರಾವಣ).

ಇಷ್ಟು ದಿವಸ ಪೇಶ್ವೆಯರ ರಾಜ್ಯವು ಒಕ್ಕಟ್ಟಿನಿಂದ ನಡೆದಿತ್ತು; ಆದರೆ ಮಾಧವರಾಯನು ಪಟ್ಟವೇರಿದಂದಿನಿಂದ ಪೇಶ್ವೆಯರ ಮನೆತನದಲ್ಲಿ ಜಗಳ ಹುಟ್ಟಿತು. ಮಾಧವರಾಯನ ಕಕ್ಕನಾದ ರಘುನಾಥರಾಯನು ಶೂರನೂ ಅನುಭವಿಯೂ ಆದರೂ ದೂರದೃಷ್ಟಿಯೂ ದೇಶಾಭಿಮಾನಿಯೂ ಆಗಿರಲಿಲ್ಲ. ಮಾಧವರಾಯನಾದರೂ ಹೆಚ್ಚು ಸ್ವಾಭಿಮಾನಿಯೂ ಸಿಟ್ಟಿನವನೂ ಆಗಿದ್ದನು. ಆದಕಾರಣ ಇವರೊಳಗೆ ಒಬ್ಬನು ಮಾಡಿದ್ದು ಮತ್ತೊಬ್ಬನಿಗೆ ಸೇರದಂತಾಯಿತು. ಆದ್ದರಿಂದ ರಘುನಾಥರಾಯನು ಸಿಟ್ಟಿಗೆದ್ದು, ತಾನು ನಡಿಸುತ್ತಿದ್ದ ಕಾರ್ಯಭಾರವನ್ನು ಬಿಟ್ಟು, ತನ್ನ ಅಣ್ಣನ ಮಗನ ಪಾರಪತ್ಯ-ಮಾಡುವ ಉದ್ದೇಶದಿಂದ ನಿಜಾಮನ ಆಶ್ರಯಕ್ಕೆ ಹೋಗಿ* ಅವನ ದಂಡಿನೊಡನೆ ಪುಣೆಯ ಮೇಲೆ ಸಾಗಿಬಂದನು. ಆಗ ಮಾಧವರಾಯನ ಕಯ್ಕಾಲುಗಳು ತಣ್ಣಗಾದ್ದರಿಂದ ಅವನು ರಘುನಾಥರಾಯನಿಗೆ ಶರಣುಹೋಗಿ, ಅವನಿಗೆ ತನ್ನ ರಾಜ್ಯವನ್ನು ಒಪ್ಪಿಸಿದನು.

* ಸಖಾರಾಮ ಭಗವಂತ ಬೋಕೀಲ (ಸಖಾರಾಮಬಾಪು) ತ್ರ್ಯಂಬಕ ವಿಶ್ವನಾಥ ಪೇಠೆ ಮುಂತಾದ ಗೃಹಸ್ಥರು ರಘುನಾಥರಾಯನ ಬೆನ್ನುಹತ್ತಿ ಹೋದರು.

ಇಲ್ಲಿಗೆ ಪೇಶ್ವೆಯರ ಮನೆಜಗಳದ ಮೊದಲನೆಯಂಕವು ಮುಗಿದಂತಾಯಿತು. ರಘುನಾಥರಾಯನಿಗೆ ಸರ್ವಾಧಿಕಾರವು ದೊರೆದ ಕೂಡಲೆ ಅವನು ತನ್ನ ವಿರೋಧಿಗಳಾದ ಮೋರೋಬಾದಾದಾನಿಂದ ಫಡನವೀಸಿಯ ಕೆಲಸವನ್ನು ತೆಗೆದು ಹಾಕಿ ಚಿಂತೋವಿಠ್ಠಲ ರಾಯರೀಕನೆಂಬವನಿಗೆ ಕೊಟ್ಟನು; ಮತ್ತು ಭವಾನರಾವ ಪ್ರತಿನಿಧಿ, ಗೋಪಾಳರಾವ ಪಟವರ್ಧನ, ನಿಂಬಾಳಕರ ಮುಂತಾದವರ ಉಂಬಳಿಗಳನ್ನು ಸೆಳೆದುಕೊಂಡನು. ಆದ್ದರಿಂದ ಇವರೆಲ್ಲರು ಹೋಗಿ ನಿಜಾಮನನ್ನು ಆಶ್ರಯಿಸಿದರು. ಆಕಾರಣ ನಿಜಾಮನು ಉಬ್ಬಿ, ಪೇಶ್ವೆಯನ ಮೇಲೆ ದಂಡೆತ್ತಿ ಬಂದು, ಗೋದಾವರೀತೀರದಲ್ಲಿದ್ದ ರಾಕ್ಷಸಭುವನವೆಂಬೂರಲ್ಲಿ ನೆರೆಸೋತು* ತಿರುಗಿಹೋದನು (೧೭೬೩).

ಈಕಾಳಗದಿಂದ ರಘುನಾಥರಾಯನ ಅಧಿಕಾರವು ಮುಗಿದಂತಾಯಿತು. ಮಾಧವರಾಯನು ಎಲ್ಲ ಅಧಿಕಾರವನ್ನು ತನ್ನ ಕಯ್ಯಲ್ಲಿ ತೆಗೆದುಕೊಂಡು, ರಘುನಾಥರಾಯನು ಕಸಕೊಂಡ ಎಲ್ಲ ಉಂಬಳಿಗಳನ್ನು ಅವರವರಿಗೆ ತಿರುಗಿ ಕೊಟ್ಟು, ನಾನಾನನ್ನು ಫಡನವೀಸಿಯ ಕೆಲಸಕ್ಕೆ ಮತ್ತೆ ನಿಯಮಿಸಿದನು. ನಾನಾನ ಮೇಲೆ ಪೇಶ್ವೆಯನ ಪ್ರೀತಿಯು ವಿಶೇಷವಾದ್ದರಿಂದ ದರಬಾರದಲ್ಲಿ ಅವನ ವರ್ಚಸ್ಸು ಬೆಳೆಯಿತು. ಅವನು ತುಕೋಜಿ ಹೋಳಕರ, ಮಹಾದಾಜಿ ಸಿಂದೆ ಇವರ ಮೇಲೆ ಉಪಕಾರಮಾಡಿದ್ದರಿಂದ ಅವರು ಅವನ ಗೆಳೆಯರಾದರು.

ಆದರೆ ನಾನಾನ ಈಯೇಳ್ಗೆಯು ಬಹಳ ದಿವಸ ನಡೆಯಲಿಲ್ಲ. ಏಕಂದರೆ ಮಾಧವರಾಯನು ಮುಂದೆ ಬಹುದಿವಸ ಬಾಳಲಿಲ್ಲ; ಅವನಿಗೆ ರಾಜಯಕ್ಷ್ಮವೆಂಬ ರೋಗವಾಗಿ ಅವನು ದಿನದಿನಕ್ಕೆ ಕ್ಷೀಣವಾಗುತ್ತಾ ನಡೆದನು. ಆದ್ದರಿಂದ ಅವನು ಇನ್ನು ಮುಂದೆ ತಾನು ಬದುಕುವದಿಲ್ಲೆಂದೆಣಿಸಿ, ಪುಣೆಯನ್ನು ಬಿಟ್ಟು ಥೇವೂರೆಂಬಲ್ಲಿಯ

* ಈ ಕಾಳಗಕ್ಕಿಂತ ಮೊದಲು ಸಖಾರಾಮ ಬಾಪು ಎಂಬವನು ಎಲ್ಲ ಪೇಶ್ವಾಯಿ ಸರದಾರರನ್ನು ಒಡಕೊಂಡುದರಿಂದ ಪೇಶ್ವೆಯನಿಗೆ ಗೆಲವು ಬಂತು.

ಗಣಪತಿಯ ಸಾನ್ನಿಧ್ಯದಲ್ಲಿ ಹೋಗಿ ನಿಂತನು. ಸಾಯುವ ಮುಂಚೆ ಅವನು ತನ್ನ ಎಲ್ಲ ಸರದಾರರನ್ನು ಕರಿಸಿ ಅಂದುದೇನಂದರೆ:– ನನ್ನ ಮೂರು ಬಯಕೆಗಳು ಪೂರ್ಣವಾಗದ್ದರಿಂದ ನನ್ನ ಜೀವವು ತೊಳಲಾಡುತ್ತದೆ. ಆಬಯಕೆಗಳಾವವೆಂದರೆ–೧, ಪಾಣಿಪತದ ಕಾಳಗದ ಸೇಡನ್ನು ಪೂರ್ಣವಾಗಿ ತೀರಿಸಿಕೊಳ್ಳುವದು; ೨, ಟೀಪುಸುಲ್ತಾನನ ಪಾರಪತ್ಯ ಮಾಡುವುದು; ೩, ನಾನು ಮಾಡಿದ ೨೫ ಲಕ್ಷ ರೂಪಾಯಿಯ ಸಾಲವನ್ನು ತೀರಿಸುವುದು. ಈಮಾತನ್ನು ಕೇಳಿ ಎಲ್ಲ ಸರದಾರರು ಒಬ್ಬರ ಮೋರೆಯನ್ನು ಮತ್ತೊಬ್ಬರು ಮಿಕಿಮಿಕಿ ನೋಡಲಾರಂಭಿಸಿದರು. ಆಗ ಎಲ್ಲರಿಗೂ ಆಶ್ಚರ್ಯವಾಗುವಂತೆ ನಾನಾನು ಸಾಲವನ್ನು ತೀರಿಸುವೆನೆಂದು ಹೇಳಿ, ತನ್ನ ಗೆಳೆಯನಾದ ರಾಮಚಂದ್ರನಾಯಕ ಪರಾಂಜಪೆ ಎಂಬವನ ನೆರವಿನಿಂದ ಮಾಧವರಾಯನು ಬರೆದುಕೊಟ್ಟ ಎಲ್ಲ ಸಾಲದ ಕಾಗದಗಳನ್ನು ತಿರುಗಿ ತರಿಸಿ ಅವನ ಕಣ್ಣ ಮುಂದೆ ಸುಡಿಸಿಬಿಟ್ಟನು. ಮುಂದೆ ತುಸು ದಿವಸದಲ್ಲೇ ಮಾಧವರಾಯನು ತೀರಿಕೊಂಡನು (ಶಕೆ. ೧೬೯೪ ಕಾ. ವ. ೮). ಬಳಿಕ ಅವನ ತಮ್ಮನಾದ ನಾರಾಯಣರಾಯನು ಪಟ್ಟವೇರಿದನು. ಅವನು ಚಿಕ್ಕವನಿದ್ದ ಕಾರಣ ರಘುನಾಥರಾಯನು ರಾಜ್ಯಕಾರ್ಯವನ್ನು ನಡಿಸಲಾರಂಭಿಸಿದನು.

ನಾರಾಯಣರಾಯನು ಪಟ್ಟವೇರಿದಂದಿನಿಂದ ಪೇಶ್ವೆಯರ ಮನೆಜಗಳದ ೨ನೆಯ ಅಂಕವು ಆರಂಭವಾಯಿತೆನ್ನಬಹುದು. ಏಕಂದರೆ ನಾರಾಯಣರಾಯನು ನಾನಾ ಮುಂತಾದವರನ್ನು ನಂಬದೆ ಬಾಬಾಜಿ ಬರ್ವೆ ಎಂಬೊಬ್ಬ ಕೀಳ್ತರದ ಮನುಷ್ಯನ ಮೇಲೆ ವಿಶ್ವಾಸವಿಟ್ಟು, ರಘುನಾಥರಾಯನನ್ನು ಮತ್ತೆ ಕಾವಲಿನಲ್ಲಿರಿಸಿದನು. ಆಗಲವನು ಸಿಟ್ಟಿಗೆದ್ದು ತನ್ನ ಕಯ್ಕೆಳಗಿನ ಜನರಿಗೆ ನಾರಾಯಣರಾಯನನ್ನು ಹಿಡಿಯಿರೆಂದು ಕಾಗದ ಬರೆದನು. ಅವನ ಹೆಂಡತಿಯಾದ ಆನಂದಿಬಾಯಿಯೆಂಬ ರಕ್ಕಸಿಯು ಹಿಡಿಶಬ್ದದ 'ಹಿ' ಅಕ್ಷರವನ್ನು 'ಹೊ' ಮಾಡಿಕೊಟ್ಟಳು. ಅದರಂತೇ ಆದಂಡಾಳುಗಳು ನಾರಾಯಣರಾಯನನ್ನು ಹಗಲೇಹಾಡು ಅರಮನೆಯಲ್ಲೇ ಕೊಂ

ದರು (೧೭೭೫ ಭಾ. ವ. ೧೩). ಬಳಿಕ ರಘುನಾಥರಾಯನು ಈ ಕೊಲೆಯು ಹದಿಮೂರನೆಯ ದಿವಸ ಪೇಶ್ವೆಯಾದನು. ಅವನು ತನ್ನ ವಿಶ್ವಾಸಿಕರಾದ **ಚಿಂತೋ ವಿಠ್ಠಲ** ಮುಂತಾದವರನ್ನು ಬೇರೆ ಬೇರೆ ಉಜ್ಜುಗಗಳಿಗೆ ನಿಯಮಿಸಿದ್ದರಿಂದ ನಾನಾ ಮುಂತಾದವರಿಗೆ ತಂತಮ್ಮ ಮನೆಗಳಲ್ಲಿ ಸ್ವಸ್ಥ ಕುಳ್ಳಿರಬೇಕಾಯಿತು.

ನಾರಾಯಣರಾಯನ ಈಕೆಟ್ಟ ಕೊಲೆಯಿಂದ ರಘುನಾಥರಾಯನು ಎಲ್ಲರಿಗೂ ಬೇಡಾದವನಾದನು. ನಾರಾಯಣರಾಯನು ಸತ್ತ ಹತ್ತನೆಯ ದಿವಸ ಪೇಶ್ವೆಯನ ಎಲ್ಲ ಆಪ್ತೇಷ್ಟರು ನೀರುಬಿಡಲಿಕ್ಕೆ ಸ್ಮಶಾನಕ್ಕೆ ಹೋದಾಗ, ನಾನಾಫಡನವೀಸ, ಸಖಾರಾಮಬಾಪು, ತ್ರ್ಯಂಬಕರಾವ ಮಾಮಾ, ಹರಿಪಂತ ಫಡಕೆ, ಈನಾಲ್ವರು ಕೂಡಿ, ನಾನಾಸಾಹೇಬನ ವಂಶದವರಿಂದ ಮಾತ್ರ ರಾಜ್ಯವನ್ನು ನಡಿಸಬೇಕು. ಮತ್ತು ದಾದಾಸಾಹೇಬನ ವಂಶದವರಿಗೆ ನಮಸ್ಕಾರ ಮಾಡಕೂಡದು ಎಂದು ಪಾರ್ಥಿವಲಿಂಗ ಮುಟ್ಟಿ ಆಣೆ ಮಾಡಿದರು. ಬಳಿಕ ನಾನಾನು ಒಂದು ದಿನ ಅರಮನೆಗೆ ಹೋದಾಗ ಸದಾಶಿವರಾವ ಭಾವುವಿನ ಮಡದಿಯಾದ **ಪಾರ್ವತಿಬಾಯಿಯು** ಹೇಳಿದ್ದೇನಂದರೆ—**ಗಂಗಾಬಾಯಿ** (ನಾರಾಯಣರಾಯನ ಹೆಂಡತಿ)ಯು ಈಗ ಎರಡು ತಿಂಗಳು ಬಸುರಿದ್ದಾಳೆ; ಆದ್ದರಿಂದ ರಘುನಾಥರಾಯನನ್ನು ಹಿಡಿದು, ಆಕೆಯ ಹೊಟ್ಟೆಯಲ್ಲಿ ಹುಟ್ಟುವ ಮಗುವನ್ನು ಪಟ್ಟದ ಮೇಲೆ ಕುಳ್ಳಿರಿಸುವ ಪ್ರಯತ್ನ ಮಾಡಿರಿ. ಈಯಪ್ಪಣೆಯ ಮೇರೆಗೆ ೧೨ ಜನ ಮುಖ್ಯ ಸರದಾರರು* ನಾನಾನ ಮನೆಯಲ್ಲಿ ಒಟ್ಟುಗೂಡಿ, ರಘುನಾಥರಾಯನು ಪುಣೆ ಬಿಟ್ಟು ಹೋದಕೂಡಲೆ ಅವನನ್ನು ಪಟ್ಟದಿಂದ ತಳ್ಳಿ, ಗಂಗಾಬಾಯಿಯ ಹೆಸರಲ್ಲಿ ರಾಜ್ಯವಾಳಬೇಕೆಂದು ಸಂಚುಮಾಡಿದರು.

ದೈವಯೋಗದಿಂದ ಈಸಂಚುಗಾರರು ಹುಡುಕುತ್ತಿದ್ದ ಸಂಧಿ

* ನಾನಾಫಡನವೀಸ, ಸಖಾರಾಮಬಾಪು ಬೋಕೀಲ, ತ್ರ್ಯಂಬಕರಾವ ಮಾಮಾ ಪೇಠೆ, ನಾರೋ ಅಪ್ಪಾಜಿ, ಬಾಪುರಾವ ಕೇಶವ, ವಿಸಾಜಿ ಕೃಷ್ಣ ಬಿನಿವಾಲೆ, ಅಪ್ಪಾಜಿ ಬಳವಂತ, ಕೃಷ್ಣಾಜಿ ಬಹಿರವ ಘತ್ತೆ, ಅಪ್ಪಾಜಿ ಪುರಂದರೆ, ಹರಿ ಬಲ್ಲಾಳ ಫಡಕೆ, **ಆನಂದರಾವ ಪಾನಸೆ, ಖಾಸಗಿವಾಲೆ.**

ಯು ಬೇಗನೆ ದೊರಕಿತು. ನಿಜಾಮ ಅಲ್ಲಿಯು ನಾರಾಯಣರಾಯನ ಕೊಲೆಯ ಸುದ್ದಿಯನ್ನು ಕೇಳಿ ಪೇಶ್ವೆಯನ ಊರುಗಳನ್ನು ಹಿಡಿದುಕೊಳ್ಳಲಾರಂಭಿಸಿದ್ದನು. ಆದ್ದರಿಂದ ರಘುನಾಥರಾಯನು ನಾನಾ ಬಾಪು ಮುಂತಾದವರನ್ನು ತನ್ನ ಸಂಗಡ ತೆಗೆದುಕೊಂಡು, ಅವನಿಗಿದುರಾಗಲಿಕ್ಕೆ ದಂಡೆತ್ತಿ ಹೊರಟನು. ಹಾದಿಯಲ್ಲಿ ಸಂಚುಗಾರರು ಏನಾದರೊಂದು ನೆವನ ಹೇಳಿ, ಪುಣೆಗೆ ತಿರುಗಿ ಬಂದು, ಗಂಗಾಪಾರ್ವತೀಬಾಯಿಯರನ್ನು ಪುರಂಧರಕ್ಕೆ ಕಳುಹಿ, ರಘುನಾಥರಾಯನ ಪಕ್ಷದವರನ್ನು ಕಾವಲಲ್ಲಿರಿಸಿ, ನಾನಾ ಬಾಪು ಇವರನ್ನು ಗಂಗಾಬಾಯಿಯ ಕಾರ್ಯಭಾರಿಗಳನ್ನು ಮಾಡಿದರು. ನಾಗಪೂರಕರ ಸಾಬಾಜಿ ಭೋಸಲೆಯು ಈಸಂಚುಗಾರರ ಪಕ್ಷವನ್ನು ಸ್ವೀಕರಿಸಿ ರಘುನಾಥರಾಯನ ಮೇಲೆ ದಂಡೆತ್ತಿ ಬರಲೊಡಂಬಟ್ಟನು.

ಅತ್ತ ರಘುನಾಥರಾಯನು ನಿಜಾಮನನ್ನು ಶರಣು ಬರಮಾಡಿಕೊಂಡು, ಸಾಬಾಜಿಭೋಸಲೆಯನಿಗೆ ಇದುರಾಗಿ ತ್ರ್ಯಂಬಕರಾವ ಮಾಮಾನನ್ನು ಕೆಲದಂಡಿನೊಡನೆ ಕಳುಹಿ, ತಾನು ಹೈದರ ಅಲ್ಲಿಯ ವಿರುದ್ಧವಾಗಿ ಕರ್ನಾಟಕಕ್ಕೆ ಹೊರಟನು. ಆದರೆ ಅಷ್ಟರಲ್ಲಿ ಅವನಿಗೆ ಪುಣೆಯಲ್ಲಿ ನಡೆದ ಒಳಸಂಚಿನ ಸುದ್ದಿ ಹತ್ತಿದ್ದರಿಂದ ಅವನು ಕರ್ನಾಟಕಕ್ಕೆ ಹೋಗುವ ಆಲೋಚನೆಯನ್ನು ಬಿಟ್ಟು, ಪುಣೆಯ ಹಾದಿಯನ್ನು ಹಿಡಿದು, ಸಂಚುಗಾರರನ್ನು ಸೇರಿದ ತ್ರ್ಯಂಬಕರಾವ ಮಾಮಾನ ದಂಡನ್ನು ಪೂರ್ಣವಾಗಿ ಸೋಲಿಸಿದನು. ಆದರೆ ರಘುನಾಥರಾಯನ ದಂಡಿನ ಮುಖ್ಯ ಮುಖ್ಯ ಸರದಾರರು ಸಂಚುಗಾರರನ್ನು ಸೇರಿದ್ದರಿಂದ ಅವನು ಮುಂದೆ ಹೋಗಲೀಸದೆ ಇಂದೂರಿಗೆ ಓಡಿಹೋದನು.

ಇತ್ತ ಗಂಗಾಬಾಯಿಯು ಶಕೆ ೧೬೯೬ ವೈಶಾಖ ಶುದ್ಧ ೭ ದಿವಸ ಪುರಂದರದಲ್ಲಿ ಗಂಡುಮಗನನ್ನು ಹೆತ್ತಳು. ನಾನಾನು ಅವನಿಗೆ ಸವಾಯಿ (ಒಂದೂಕಾಲು) ಮಾಧವರಾಯನೆಂಬ ಹೆಸರನ್ನಿಟ್ಟು, ಸಾತಾರೆಯ ಮಹಾರಾಜನಿಂದ ಅವನಿಗೆ ಪೇಶ್ವೆಯ ವಸ್ತ್ರಗಳನ್ನು ಕೊಡಿಸಿದನು; ಈಸಂಗತಿಯಿಂದ ರಘುನಾಥರಾಯನ

ಆಶೆಗಳು ಕಡನೆಯಾದರೂ ಅವನು ಧೈರ್ಯ ಬಿಡದೆ ಸಿಂದೆ-ಹೋಳಕರರ ದಂಡನ್ನು ತನ್ನ ಸಹಾಯಕ್ಕೆ ತೆಗೆದುಕೊಂಡು, ಪುಣೆಯ ಮೇಲೆ ಸಾಗಿ ಬಂದನು. ಆದರೆ ನಾನಾ ಬಾಪು ಇವರು ಸಿಂದೆ ಹೋಳಕರರನ್ನು ತಮ್ಮ ಕಡೆಗೆ ಒಡಕೊಂಡುದರಿಂದ ಅವನು ನಿರುಪಾಯನಾಗಿ ಗುಜರಾಥಕ್ಕೆ ಹೋದನು.* ಹರಿಪಂತ ಫಡಕೆ ಎಂಬ ಸಂಚುಗಾರರ ದಳವಾಯಿಯು ಅವನನ್ನು ಬೆನ್ನಟ್ಟಿದ್ದರಿಂದ ಅವನು ಸುರತಕ್ಕೆ ಹೋಗಿ, ಅಲ್ಲಿ ಇಂಗ್ಲಿಷರ ಮರೆಬಿದ್ದನು.

೧ನೆಯ ಬಾಜಿರಾಯನ ತಮ್ಮನಾದ ಚಿಮಾಜಿಯಪ್ಪನು ಸಾಷ್ಟಿ ನಡುಗಡ್ಡೆಯನ್ನು ಹಿಡಿದುಕೊಂಡಂದಿನಿಂದ ಇಂಗ್ಲಿಷರು ಅದನ್ನು ತಿರುಗಿ ತೆಗೆದುಕೊಳ್ಳಲಿಕ್ಕೆ ಹೊಂಚು-ಹಾಕಿಕೊಂಡು ಕುಳಿತಿದ್ದರು. ಪೇಶ್ವೆಯರ ಮನೆಜಗಳವು ಬಲಿತು ನಾರಾಯಣರಾಯನ ಕೊಲೆಯಾದ ಕೂಡಲೆ ಅವರು ಅದನ್ನು ಹಿಡಿದುಕೊಂಡು ಮುಂದೆ ಏನು ಮಾಡಬೇಕೆಂಬ ಎಣಿಕೆಯಲ್ಲಿರುವಾಗ ರಘುನಾಥರಾಯನು ಶರಣುಬಂದು, ತನಗೆ ನೆರವಾಗಿ ಪೇಶ್ವಾಯಿಯನ್ನು ಕೊಡಿಸಿದರೆ ಸಾಷ್ಟಿ ನಡುಗಡ್ಡೆಯನ್ನೂ ೧೯½ ಲಕ್ಷ ವಾರ್ಷಿಕೋತ್ಪನ್ನವುಳ್ಳ ವಸಯಿ ಪ್ರಾಂತವನ್ನೂ ದಂಡಿನ ವೆಚ್ಚಕ್ಕಾಗಿ ತಿಂಗಳೊಂದಕ್ಕೆ ೧½ ಲಕ್ಷ ರೂಪಾಯಿಗಳನ್ನೂ ಕೊಡುತ್ತೇನೆಂದು ಮಾತುಕೊಟ್ಟನು. ಆಗ ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಂತಾಯಿತು. ಆದ್ದರಿಂದ ಮುಂಬಯಿ ಅಧಿಪತಿಯು ಈಮಾತಿಗೊಡಂಬಟ್ಟು, ಕರ್ನಲ್ ಕೀಟಿಂಜನೆಂಬ ದಳವಾಯಿಯೊಡನೆ ದಂಡುಕೊಟ್ಟು, ರಘುನಾಥರಾಯನಿದ್ದ ಸುರತಕ್ಕೆ ಅವನನ್ನು ಕಳುಹಿದನು. ಈದಂಡಿನವರು ಪೇಶ್ವೆಯನ ರಾಜ್ಯವನ್ನು ಹೊಕ್ಕು, ತಮಗೆ ಇದುರಾಗಲಿಕ್ಕೆ ಬಂದ ಹರಿಪಂತಫಡಕೆಯನ ದಂಡನ್ನು ಆರಾಸವೆಂಬಲ್ಲಿ ಸೋಲಿಸಿ,

---

* ರಘುನಾಥರಾಯನು ಗುಜರಾಥಕ್ಕೆ ಹೋಗುವಾಗ ತನ್ನ ಎರಡನೆಯ ಹೆಂಡತಿಯಾದ ಆನಂದೀಬಾಯಿಯು ತುಂಬಾ ಬಸುರಿದ್ದುದರಿಂದ ಆಕೆಯನ್ನು ಧಾರದಲ್ಲಿಟ್ಟು ಹೋದನು. ಮುಂದೆ ತುಸು ದಿವಸದಲ್ಲಿ ಆಕೆಯು ಕಡೆಯ ಪೇಶ್ವೆಯನಾದ ಬಾಜೀರಾಯನನ್ನು ಹೆತ್ತಳು.

ಮಳೆಗಾಲ ಬಂದುದರಿಂದ ಡಬಯಿಯೆಂಬಲ್ಲಿ ಪಾಳಯಹಾಕಿದರು.

ಈಕಾಲಕ್ಕೆ ವಾರನ್ ಹೇಸ್ಟಿಂಗ್ಸನೆಂಬವನು ಈದೇಶದ ಸರ್ವಾಧಿಪತಿಯಾಗಿದ್ದನು. ಮುಂಬಯಿಯಧಿಪತಿಯು ಹೂಡಿದ ಯುದ್ಧವು ಅವನ ಮನಸ್ಸಿಗೆ ಬಾರದ್ದರಿಂದ ಅವನು ಯುದ್ಧವನ್ನು ನಿಲ್ಲಿಸಬೇಕೆಂದು ಮುಂಬಯಿಸರಕಾರಕ್ಕೆ ಹುಕುಮುಕಳುಹಿ, ಕರ್ನಲ್ ಅಪ್ಟನ್ನನೆಂಬವನನ್ನು ಬಾಪು ನಾನಾ ಇವರೊಡನೆ ಮಾತಾಡಲಿಕ್ಕೆ ಪುರಂದರಕ್ಕೆ ಕಳುಹಿದನು. ಅವರ ನಡುವೆ ಮಾತುಕಥೆಗಳಾಗಿ ಕೆಳಗೆ ಬರೆದ ಒಪ್ಪಂದದ ಶರ್ತುಗಳು ಗೊತ್ತಾದವು:—

೧. ಪೇಶ್ವೆಯು ಸಾಷ್ಟಿ ಸಡುಗಡ್ಡೆಯನ್ನು ಇಂಗ್ಲಿಷರಿಗೆ ಬಿಟ್ಟುಕೊಡಬೇಕು, ಮತ್ತು ೩ಲಕ್ಷ ರೂಪಾಯಿ ಉತ್ಪನ್ನವಾಗುವ ಬಡೋಚಪ್ರಾಂತವನ್ನು ಇಂಗ್ಲಿಷರಿಗೆ ಒಪ್ಪಿಸಬೇಕು.

೨. ಇಂಗ್ಲಿಷರು ತಮ್ಮ ದಂಡನ್ನು ತಿರುಗಿ ಒಯ್ಯಬೇಕು, ಮತ್ತು ಒಂದು ತಿಂಗಳೊಳಗೆ ರಘುನಾಥರಾಯನು ತನ್ನ ದಂಡಿನವರನ್ನು ಮನೆಗೆ ಕಳಿಸಿಕೊಡುವಂತೆ ಮಾಡಬೇಕು.

೩. ರಘುನಾಥರಾಯನು ಪೇಶ್ವೆಯನ ಆಶ್ರಯದಲ್ಲಿರಲಿಕ್ಕೊಡಂಬಟ್ಟರೆ, ಅವನು ಕೋಪರಗಾವವೆಂಬಲ್ಲಿರಬೇಕು, ಮತ್ತು ಪೇಶ್ವೆಯು ಅವನ ಬೆಂಬಲವಾಗಿದ್ದ ೧೦೦೦ ಮಂದಿ ಸ್ವಾರರ ಸಂಬಳವನ್ನೂ ೨೦೦ ಮಂದಿ ಊಳಿಗದವರ ಸಂಬಳವನ್ನೂ ಕೊಡಬೇಕಲ್ಲದೆ ಅವನ ವೆಚ್ಚಕ್ಕಾಗಿ ತಿಂಗಳೊಂದಕ್ಕೆ ೨೫,೦೦೦ ರೂಪಾಯಿ ಕೊಡಬೇಕು.

೪. ಇಂಗ್ಲಿಷರು ರಘುನಾಥರಾಯನಿಗಾಗಲಿ ಉಳಿದ ಪೇಶ್ವೆಯನ ವಿರುದ್ಧ ಬಂಡುಗಾರರಿಗಾಗಲಿ ನೆರವಾಗ ಕೂಡದು.

ಈಯೊಪ್ಪಂದವು ಶಕೆ ೧೬೯೭ ಫಾಲ್ಗುಣ ಶುದ್ಧ ೧೧ ದಿವಸವಾಯಿತು.

ಇಷ್ಟು ದಿವಸ ನಾನಾನು ಉಳಿದ ಸರದಾರರೊಡನೆ ಆಲೋಚಿಸಿ ರಾಜಕಾರ್ಯವನ್ನು ಜರಗಿಸುತ್ತಿದ್ದನು. ಆದರೆ ಇನ್ನು ಮುಂ

ದೆ ಅವನು ಸ್ವಬುದ್ಧಿಯಿಂದ ಕೆಲಸ ನಡಿಸಿ ಹೆಸರುವಾಸಿಯಾಗುವ ಹೊತ್ತು ಬಂತು. ಅದು ಹೇಗಂದರೆ.—ಶಕೆ ೧೬೯೮ರಲ್ಲಿ ಹೈದರ ಅಲ್ಲಿಯ ಉರವಣಿಗೆಯು ಹೆಚ್ಚಾದ್ದರಿಂದ ಹರಿಪಂತ ಫಡಕೆಯು ಅವನ ಮೇಲೆ ದಂಡೆತ್ತಿ ಹೋದನು. ಅದೇ ಸಮಯದಲ್ಲಿ ಮಹಾದಾಜಿ ಸಿಂದೆಯು ಕೊಲ್ಲಾಪುರದವರನ್ನು ದಂಡಿಸಲಿಕ್ಕೆ ಹೋದನು. ಈಸಂಧಿಯನ್ನು ಸಾಧಿಸಿ ನಾನಾನ ಪ್ರತಿಸ್ಪರ್ಧಿಯಾದ ಮೋರೋಬನು ಸಖಾರಾಮ ಬಾಪು ಹೋಳಕರ ಮುಂತಾದವರನ್ನೊಡಕೊಂಡು, ನಾನಾನನ್ನು ಹಿಡಿಯಲಿಕ್ಕೂ ರಘುನಾಥರಾಯನನ್ನು ಮುಖ್ಯಕಾರ್ಯಭಾರಿಯನ್ನು ಮಾಡಲಿಕ್ಕೂ ಒಳಸಂಚು-ಮಾಡಿದನು. ಈಸುದ್ದಿಯು ನಾನಾನಿಗೆ ಹತ್ತಿದರೂ ಸಂಚುಗಾರರ ಪಾರಪತ್ಯ ಮಾಡುವಷ್ಟು ಶಕ್ತಿಯು ಅವನಲ್ಲಿದ್ದಿಲ್ಲ. ಆದ್ದರಿಂದ ಅವನು ತನ್ನನ್ನು ಹಿಡಿಯಲಿಕ್ಕೆ ಗೊತ್ತುಮಾಡಿದ ಹೊತ್ತಿಗಿಂತ ತುಸು ಮೊದಲೇ ಎರಡನೆಯವರಿಗೆ ತಿಳಿಸದೆ ಪುರಂದರಕ್ಕೆ ಹೊರಟು ಹೋದನು. ಮರುದಿವಸ ಅಂದರೆ ಫಾಲ್ಗುಣವದ್ಯ ೧೩ ದಿವಸ ಮೋರೋಬನು ಪುಣೆಯನ್ನು ಹೊಕ್ಕು ಎಲ್ಲ ರಾಜ್ಯಕಾರ್ಯಭಾರವನ್ನು ತನ್ನ ಕಯ್ಯಲ್ಲಿ ತೆಗೆದುಕೊಂಡನು. ಆಗ ದೀರ್ಘದೃಷ್ಟಿಯಾದ ನಾನಾನು ಹೆಚ್ಚು ದ್ವೇಷಬೆಳಿಸದೆ ಮೋರೋಬನೊಡನೆ ಸ್ನೇಹದ ಮಾತುಗಳನ್ನು ನಡಿಸಿ, ರಘುನಾಥರಾಯನನ್ನು ತಿರುಗಿ ಕರಿಸಿದರೆ ಎಲ್ಲರಿಗೂ ಕೇಡುಂಟೆಂದು ತಿಳಿಹೇಳಿ, ಸವಾಯಿ ಮಾಧವರಾಯನು ದೊಡ್ಡವನಾಗುವ ವರೆಗೆ ೧ ಮೋರೋಬಾ, ೨ ಸಖಾರಾಮ ಬಾಪು ೩ ಬಜಾಬಾ ಪುರಂದರೆ, ೪ ಚಿಂತೋ ವಿಠ್ಠಲ, ೫ ನಾನಾ ಈಮೇರೆಗೆ ಅಯ್ದು ಜನರು ಒಟ್ಟುಗೂಡಿ ರಾಜ್ಯವನ್ನು ನಡಿಸಬೇಕೆಂತಲೂ ತಾನು ಚಿಕ್ಕ ಪೇಶ್ವೆಯ ಸಂರಕ್ಷಕನಾಗಿ ಪುರಂದರದಲ್ಲೆ ಇರಬೇಕೆಂತಲೂ ಎಲ್ಲರನ್ನು ಒಡಂಬಡಿಸಿದನು. ಈಕಾಲಕ್ಕೆ ನಾನಾನು ತನ್ನ ಮನಸ್ಸಿನಲ್ಲಿ ಮಾಡಿದ ಹಂಚಿಕೆಯನ್ನು ಒಬ್ಬರಿಗೂ ತಿಳಿಯಗೊಡಲಿಲ್ಲ. ಮುಂದೆ ಕೆಲವು ದಿವಸಗಳಾದ ಬಳಿಕ ಅವನಿಗೆ ಅನುಕೂಲರಾದ ಫಡಕೆಸಿಂದೆಯರು ತಮ್ಮಿಬ್ಬರ ದಂಡುಗಳನ್ನು ಒಟ್ಟುಗೂ

ಡಿಸಿ ಪುರಂದರಕ್ಕೆ ಬಂದು, ಹೋಳಕರನನ್ನು ಒಡಕೊಂಡು ನಾನಾನ ಅಪ್ಪಣೆಯಂತೆ ಮೋರೋಬನನ್ನು ಹಿಡಿದು ಅಹಮ್ಮದನಗರದಲ್ಲಿಯೂ ಬಜಾಬಾ ಪುರಂದರೆಯನ್ನು ವಂದನವೆಂಬಲ್ಲಿಯೂ ಸೆರೆಯಲ್ಲಿಟ್ಟುದರಿಂದ ನಾನಾನು ಪೇಶ್ವೆಯರ ರಾಜ್ಯಕ್ಕೆ ಮತ್ತೆ ಮುಖ್ಯಸ್ಥನಾದನು (ಶಕೆ ೧೭೦೦ ಆಷಾಢವದ್ಯ ದ್ವಿತೀಯಾ).

ಇನ್ನು ಮುಂದೆ ಸವಾಯಿ ಮಾಧವರಾಯನ ದುರ್ಮರಣದ ವರೆಗೆ ನಾನಾನ ಚರಿತ್ರವೇ ಪೇಶ್ವೆಯರ ಇತಿಹಾಸವೆನ್ನಬಹುದು. ಈಯವಧಿಯಲ್ಲಿ ನಡೆದ ಎಲ್ಲ ಮಹತ್ವದ ಸಂಗತಿಗಳು ನಾನಾನ ವಿಚಾರದ ಫಲಗಳೇ ಸರಿ. ಆದ್ದರಿಂದ ನಾನಾನಲ್ಲಿ ದೀರ್ಘದೃಷ್ಟಿ ಕಾರ್ಯದಕ್ಷತಾ ಜನಸೌಹೃದಯ ಚಾತುರ್ಯ ಮುಂತಾದ ಗುಣಗಳು ಎಷ್ಟು ಮಟ್ಟಿಗೆ ಇದ್ದವೆಂಬದು ಅವನು ಮಾಡಿದ ಕೃತ್ಯಗಳಿಂದ ತಿಳಿದುಕೊಳ್ಳಬಹುದು.

ಪುರಂದರದ ಒಪ್ಪಂದವು ಸ್ವಾಭಾವಿಕವಾಗಿ ಮುಂಬಯಿ ಸರಕಾರದವರಿಗೆ ಸೇರಲಿಲ್ಲ. ಆದ್ದರಿಂದ ಅವರು ಸರ್ವಾಧಿಪತಿಯು ವಿರುದ್ಧವಾಗಿ ಇಂಗ್ಲಂಡಕ್ಕೆ ಬರೆಯಲು, ಅಲ್ಲಿಯ ಆಡಳತೆಗಾರರು ಸರ್ವಾಧಿಪತಿಗೆ ದೋಷಕೊಟ್ಟು ಬರೆದರು. ಇದರಿಂದ ಮುಂಬಯಿಯಧಿಪತಿಯು ಧೈರ್ಯಗೊಂಡು ಪುರಂದರದ ಒಪ್ಪಂದದಂತೆ ನಡೆಯದೆ, ಅದರ ಶರ್ತುಗಳ ವಿರುದ್ಧವಾಗಿ ಇಂಗ್ಲಿಷ ದಂಡನ್ನು ಸುರತ ಬಡೋಜಗಳಲ್ಲಿ ಯುದ್ಧದ ಸಿದ್ಧತೆಯಲ್ಲಿಟ್ಟನು; ರಘುನಾಥರಾಯನನ್ನು ಪೇಶ್ವೆಯ ಕಡೆಗೆ ಕಳುಹಲಿಲ್ಲ; ಮತ್ತು ತೋತಯಾಭಾವು ಎಂಬವನು ಕೊಂಕಣದಲ್ಲಿ ಬಂಡಾಯ-ಹೂಡಲು ಅವನಿಗೆ ಒಳಗಿಂದೊಳಗೆ ಅನುಕೂಲನಾದನೆಂಬ ಸಂಶಯವನ್ನು ನಾನಾನ ಮನಸ್ಸಿನಲ್ಲಿ ಹುಟ್ಟಿಸಿದನು. ಈಕಾರಣಗಳಿಂದ ನಾನಾನು ಇಂಗ್ಲಿಷರಿಗೆ ಕೊಡಲೊಪ್ಪಿದ ಪ್ರಾಂತವನ್ನು ಕೊಡಲಿಲ್ಲ. ಇದಲ್ಲದೆ ಅವನು ಪುಣೆಗೆ ಬಂದ ಫ್ರಾನ್ಸದ ವಕೀಲನಿಗೆ ಬಹಳ ಆದರಾತಿಥ್ಯ ತೋರಿಸಿದನು. ಆದ್ದರಿಂದ ಇಂಗ್ಲಿಷರು ಪೇಶ್ವೆಯನೊಡನೆ ಯುದ್ಧ

ಮಾಡಬೇಕೆಂದು ನಿಶ್ಚಯಿಸಿ, ಮುಂಬಯಿಯಿಂದ ಪನವೇಲ ಮಾರ್ಗವಾಗಿ ೪೦೦೦ ದಂಡನ್ನು ಕಳುಹಿದರು (ಶಕೆ ೧೭೦೨).

ಈಕಾಲಕ್ಕೆ ನಾನಾನು ಮಾಡಿದ ಪ್ರಯತ್ನವು ಹೊಗಳತಕ್ಕಂತಹದೇ ಸರಿ. ಅವನು ಮುಂಬಯಿಯಲ್ಲಿದ್ದ ವಕೀಲನಿಂದ ಇಂಗ್ಲಿಷರ ಎಲ್ಲ ವಿಚಾರಗಳನ್ನು ಮೊದಲೇ ಅರಿತುಕೊಂಡು, ಪೇಶ್ವೆಯನ ಎಲ್ಲ ಸರದಾರರಿಗೆ ತಂತಮ್ಮ ದಂಡಿನೊಡನೆ ದಸರೆಯ ದಿವಸ ಪುಣೆಗೆ ಬರಬೇಕೆಂದು ಅಪ್ಪಣೆಮಾಡಿ, ಇಂಗ್ಲಿಷರ ರಾಜ್ಯದ ಮೇರೆಯ ಮೇಲಿದ್ದ ಎಲ್ಲ ಕೋಟೆಗಳಿಗೆ ದಂಡಾಳುಗಳನ್ನೂ ಅನ್ನಯುದ್ಧಸಾಮಗ್ರಿಗಳನ್ನೂ ಕಳುಹಿದನು. ಇಂಗ್ಲಿಷರಿಗಿದುರಾಗಿ ರಣಾಂಗಣದೊಳಗೆ ಕಾದುವಷ್ಟು ಶಕ್ತಿಯು ಮರಾಟರಲ್ಲಿ ಇಲ್ಲೆಂಬದು ನಾನಾನಿಗೆ ಗೊತ್ತಿತ್ತು. ಆದ್ದರಿಂದ ಅವನು ತನ್ನ ಎಲ್ಲ ದಳವಾಯಿಗಳಿಗೆ ಇಂಗ್ಲಿಷರ ಮುಂದೆ ನಿಂತು ಕಾದಬಾರದೆಂತಲೂ ಅವರಿಗೆ ಅನ್ನಸಾಮಗ್ರಿಯು ಮುಟ್ಟದಂತೆ ಮಾಡಿ ಅವರನ್ನು ಹಣ್ಣುಮಾಡಬೇಕೆಂತಲೂ ಇದ್ದ ಊರನ್ನು ಬಿಟ್ಟು ಹಿಂತಿರುಗುವ ಪ್ರಸಂಗ ಬಂದರೆ ಆವೂರನ್ನು ಸುಟ್ಟು ಬಿಡಬೇಕೆಂತಲೂ ಸೂಚಿಸಿದನು.* ಸಹ್ಯಾದ್ರಿಯ ಘಟ್ಟದ ಪ್ರದೇಶದೊಳಗೆ ಮುಂಬಯಿ ದಂಡಿಗೂ ಪೇಶ್ವೆಯರಿಗೂ ಕೆಲದಿವಸ ಬಡದಾಟವಾದ ಬಳಿಕ, ಇಂಗ್ಲಿಷರು ವಡಗಾವವೆಂಬಲ್ಲಿ ಸೋತು ಶರಣುಬಂದರು (ಶಕೆ ೧೭೦೧ ಪೌಷ್ಯವದ್ಯ ೯).

ಈಯುದ್ಧದಲ್ಲಿ ನಮ್ಮ ಚರಿತ್ರನಾಯಕನ ಅಂಗವು ಬಲು ತುಸು ಇದ್ದುದರಿಂದ ಮುಂಬಯಿಯ ದಂಡಿನ ಹಾಡನ್ನು ಮೇಲೆ ತುಸುದರಲ್ಲಿ ಹೇಳಿದಂತೆ, ಬಂಗಾಲದಿಂದ ಬಂದ ಇಂಗ್ಲಿಷರ ದೊಡ್ಡ ದಂಡು ಗುಜರಾಥದಲ್ಲಿ ಏನು ಮಾಡಿತೆಂಬದನ್ನಾದರೂ ಸ್ವಲ್ಪದರಲ್ಲಿ

---

* ಇಂಗ್ಲಿಷರು ಪುಣೆಯ ವರೆಗೆ ಸಾಗಿ ಬಂದರೆ ಪುಣೆಯನ್ನಾದರೂ ಸುಟ್ಟು ಬಿಡಬೇಕೆಂದು ನಾನಾನ ಮನಸ್ಸಿನಲ್ಲಿತ್ತೆಂಬದಾಗಿ ಅವನ ಚರಿತ್ರಕಾರರು ಬರೆಯುತ್ತಾರೆ. ಈ ಹಂಚಿಕೆಯೂ ರೂಸದೇಶದ ಬಾದಶಹನಾದ ಅಲೆಗ್ಝಾಂಡರನು ಹೆಸರಾದ ನೆಪೋಲಿಯನ್ ಬೊನಾಪಾರ್ಟನನ್ನು ಬಲೆಯಲ್ಲಿ ಹಿಡಿಯಲಿಕ್ಕೆ ೧೮೧೧ರಲ್ಲಿ ಮಾಡಿದ ಹಂಚಿಕೆಯೂ ಒಂದೇ ಆಗಿದ್ದವೆಂದು ಹೇಳಬಹುದು. ಆದರೆ ಇಂತಹ ಪ್ರಸಂಗವೇ ನಾನಾನಿಗೆ ಬರಲಿಲ್ಲ.

ಹೇಳಿದರೆ ಸಾಕಾಗುವದು. ಈದೊಡ್ಡ ದಂಡಿನ ಮುಖ್ಯಸ್ಥನು ಇಂಗ್ಲಿಷರ ಮುಖ್ಯ ದಳವಾಯಿಯಾದ ಕರ್ನಲ್ ಗೊಡಾರ್ಡನೆಂಬವನಿದ್ದನು. ಅವನು ಶೂರನೂ ಧೀರನೂ ವಿಚಾರಿಯೂ ಆದ್ದರಿಂದ ಹಾದಿಯಲ್ಲಿ ಭೋಸಲೆಯನ್ನು ತನ್ನ ಕಡೆಗೆ ಮಾಡಿಕೊಂಡು, ಹುಸೆಂಗಾಬಾದ-ಅವರಂಗಾಬಾದಗಳ ಮೇಲಿಂದ ಗುಜರಾಥವನ್ನು ಹೊಕ್ಕನು. ಈಕಾಲಕ್ಕೆ ಸಿಂದೆ-ಹೋಳಕರರು ವಡಗಾವದಲ್ಲಿ ಇಂಗ್ಲಿಷರನ್ನು ಸೋಲಿಸಿ ಅದೇ ಪುಣೆಗೆ ಬಂದಿದ್ದರು. ಅವರು ಗೊಡಾರ್ಡನು ದಂಡೆತ್ತಿಬಂದ ಸುದ್ದಿಯನ್ನು ಕೇಳಿ, ಅವನಿಗಿದುರಾಗಲಿಕ್ಕೆ ಹೊರಟರು.* ಅತ್ತ ಗೊಡಾರ್ಡನು ಫತ್ತೆಸಿಂಗ ಗಾಯಕವಾಡನನ್ನು ತನ್ನ ಕಡೆಗೆ ಮಾಡಿಕೊಂಡು, ಡಭಯಿ-ಅಹಮ್ಮದಾಬಾದಗಳನ್ನು ಹಿಡಿದುಕೊಂಡನು. ಆಗ ಸಿಂದೆಯನು ಅವನಿಗೆ ಇದುರಾಗಲಿಕ್ಕೆ ಧೈರ್ಯ ಸಾಲದೆ ಒಪ್ಪಂದದ ಮಾತುಗಳನ್ನು ನಡಿಸಿ ಹೊತ್ತುಗಳೆಯಲಾರಂಭಿಸಿದನು.

ಅಷ್ಟರಲ್ಲಿ ಪೇಶ್ವೆಯನಿಗೆ ಅನುಕೂಲವಾದ ಒಂದು ಸಂಗತಿಯು ವರ್ತಿಸಿತು. ನಾನಾನು ನಾಗಪುರ-ಹೈದರಾಬಾದ-ಶ್ರೀರಂಗಪಟ್ಟಣಗಳಿಗೆ ವಕೀಲರನ್ನು ಕಳುಹಿ ಭೋಸಲೆ, ಹೈದರ ಅಲ್ಲಿ, ನಿಜಾಮ ಅಲ್ಲಿ ಇವರನ್ನು ಇಂಗ್ಲಿಷರ ರಾಜ್ಯದ ಮೇಲೆ ದಂಡೆತ್ತಿ ಹೋಗಲಿಕ್ಕೊಡಂಬಡಿಸಿದನು. ಭೋಸಲೆ-ನಿಜಾಮರು ಮಾತುಕೊಟ್ಟಂತೆ ನಡೆಯದಿದ್ದರೂ ಹೈದರ ಅಲ್ಲಿಯು ಇಂಗ್ಲಿಷ ರಾಜ್ಯದೊಳಗೆ ದಾಳಿಮಾಡಿ, ಮದ್ರಾಸ ಸರಕಾರದವರನ್ನು ಜೇರಿಗೆ ತಂದನು. ಆದ್ದರಿಂ

---

* ವಡಗಾವದಲ್ಲಿ ಇಂಗ್ಲಿಷರು ಸೋತ ಬಳಿಕ ರಘುನಾಥರಾಯನು ಸಿಂದೆಯನಿಗೆ ಶರಣುಬಂದನು. ಮುಂದೆ ಸಿಂದೆಯು ಅವನನ್ನು ನಾನಾನಿಗೆ ಒಪ್ಪಿಸದೆ, ಝಾಂಶಿಯಲ್ಲಿ ಸೆರೆಯಿಡುವ ಉದ್ದೇಶದಿಂದ ತನ್ನ ದಿವಾನನೊಡನೆ ಅಲ್ಲಿಗೆ ಕಳುಹಲು, ಅವನು ಹಾದಿಯಲ್ಲಿ ತಪ್ಪಿಸಿಕೊಂಡು ಓಡಿಹೋಗಿ ಭಡೋಚದಲ್ಲಿದ್ದ ಇಂಗ್ಲಿಷರ ಮರೆಹೊಕ್ಕನು. ಸಿಂದೆಯನ ಸೆರೆಯಾಳಾಗಿ ಅವನ ವಶದಲ್ಲಿದ್ದ ಸಖಾರಾಮ ಬಾಪು ಬೋಕೀಲ, ಚಿಂತೋ ವಿಠ್ಠಲ ರಾಯರೀಕರ, ಸಖಾರಾಮ ಹರಿ ಪ್ರಭೃತಿ ಮುಂತಾದವರನ್ನು ನಾನಾನು ತನ್ನ ಕಯ್ಯಲ್ಲಿ ತೆಗೆದುಕೊಂಡು, ಅವನಲ್ಲೆಬಡಿಸಿ ಸಾಯುಗೊಟ್ಟುದರಿಂದ ತನ್ನ ಸ್ವಭಾವಕ್ಕೆ ಕುಂದುತಂದುಕೊಂಡನೆನ್ನ ಬಹುದು.

ದ ಮದ್ರಾಸದ ಅಧಿಪತಿಯು ಈಪೇಶ್ವೆಯರ ಯುದ್ಧವನ್ನು ಬೇಗನೆ ಮುಗಿಸಿ, ತನ್ನ ನೆರವಿಗೆ ದಂಡನ್ನು ಕಳುಹಿರೆಂದು ಅಂಗಲಾಚಿ ಬೇಡಿಕೊಳ್ಳಲಾರಂಭಿಸಿದನು. ಆದ್ದರಿಂದ ಗೊಡಾರ್ಡನು ಪುಣೆಯ ಮೇಲೆ ಸಾಗಿ ಹೋಗಿ, ಪೇಶ್ವೆಯರನ್ನು ಬೇಗನೆ ಹಣ್ಣಿಗೆ ತರಬೇಕೆಂಬ ಬಯಲಾಶೆಗೆ ಒಳಗಾಗಿ ಕೊಂಕಣಕ್ಕೆ ಹೋಗಿ ವಸಯಿಯನ್ನು ಹಿಡಿದುಕೊಂಡನು (ಶಕೆ ೧೭೦೨). ಆದರೆ ಕೊಂಕಣವು ಮರಾಟರ ಮನೆಯಾದ್ದರಿಂದಲೂ ಅಲ್ಲಿಯ ಹಳ್ಳತಿಟ್ಟುಗಳೆಲ್ಲ ಅವರ ಗೊತ್ತಿನವಾದ್ದರಿಂದಲೂ ಅವರು ಇಂಗ್ಲಿಷರಿಗೆ ಅನ್ನಸಾಮಗ್ರಿಯು ದೊರೆಯದಂತೆ ಮಾಡಿದರು. ಈಕಾರಣದಿಂದಲೂ ಮದ್ರಾಸದಲ್ಲಿ ಹೈದರಅಲ್ಲಿಯ ಹಾವಳಿಯು ಹೆಚ್ಚಾದ್ದರಿಂದಲೂ ಇಂಗ್ಲಿಷರು ಒಪ್ಪಂದಮಾಡಲಿಕ್ಕೆ ಆತುರಪಡಲಾರಂಭಿಸಿದರು. ಮೊದಲು ನಾನಾನು ಹೈದರಅಲ್ಲಿಯನ್ನು ಬಿಟ್ಟು ಒಪ್ಪಂದಮಾಡಲಿಕ್ಕೆ ಬರುವದಿಲ್ಲೆಂದು ತೋರಿಕೆಗೆ ಹೇಳಿ, ಇಂಗ್ಲಿಷರು ತುಸುಹೆಚ್ಚು ಅನುಕೂಲವಾದ ಶರ್ತುಗಳನ್ನು ಹೇಳಿದ ಕೂಡಲೆ ಮುಂದಿನ ಪರಿಣಾಮವನ್ನು ಲಕ್ಷ್ಯಕ್ಕೆ ತಾರದೆ, ಸಿಂದೆಯನ ಮಧ್ಯಸ್ಥಿಕೆಯಿಂದ ಅವರೊಡನೆ ಒಪ್ಪಂದಮಾಡಿಕೊಂಡನು.* ಈಯೊಪ್ಪಂದದ ಶರ್ತುಗಳು ಸಾಲ್ಬಾಯಿಯಲ್ಲಿ ಗೊತ್ತಾದ್ದರಿಂದ ಇದಕ್ಕೆ ಸಾಲ್ಬಾಯಿಒಪ್ಪಂದವೆನ್ನುತ್ತಾರೆ. ಇದು ಶಕೆ ೧೭೦೪ ಜ್ಯೇಷ್ಠಮಾಸದಲ್ಲಿ ಆಯಿತು. ಇದರಲ್ಲಿದ್ದ ೧೭ ಕಲಮುಗಳಲ್ಲಿ ಮುಖ್ಯವಾದವುಗಳಾವವೆಂದರೆ:—

೧. ಇಂಗ್ಲಿಷರು ಸಾಷ್ಟಿಯನ್ನು ತಮ್ಮ ಕಡೆಗೆ ಇಟ್ಟುಕೊಂಡು, ಯುದ್ಧದಲ್ಲಿ ಹಿಡಿದುಕೊಂಡ ಪೇಶ್ವೆಯರ ಎಲ್ಲ ಸ್ಥಳಗಳನ್ನು ಅವರಿಗೆ ತಿರುಗಿ ಕೊಡಬೇಕು.

---

* ಇದು ವಿಶ್ವಾಸಘಾತಕತನವಲ್ಲವೇ? ಈಸ್ವಾರ್ಥಸಾಧಕತನವು ನಾನಾನ ದೂರದೃಷ್ಟಿಗೆ ಕುಂದುತರುತ್ತದೆ. ಇದೇ ಕಾರಣದಿಂದ ಹೈದರ ಅಲ್ಲಿಯೂ ಅವನ ಮಗನಾದ ಟೀಪುಸುಲ್ತಾನನೂ ಪೇಶ್ವೆಯರನ್ನು ನಂಬದಂತಾದರು. ನಾನಾನ ಈ ಕೃತಿಯಿಂದ ಇಂಗ್ಲಿಷರ ಸಾಮ್ರಾಜ್ಯವುಂಟಾಯಿತೆಂಬದು ಸಂತೋಷದ ಸಂಗತಿಯಾದರೂ, ಈಕೃತಿಯು ನಾನಾನ ಜಾಣ್ಮೆಗೆ ಕಲಂಕ ತಾರದೆ ಬಿಡದು.

೨. ಪುರಂದರದ ಒಪ್ಪಂದದಲ್ಲಿ ಪೇಶ್ವೆಯಸು ಇಂಗ್ಲಿಷರಿಗೆ ಕೊಡಲೊಪ್ಪಿದ ಬಡೋಚದ ೩ ಲಕ್ಷದ ಪ್ರಾಂತದ ಮೇಲಿನ ಹಕ್ಕನ್ನು ಇಂಗ್ಲಿಷರು ಬಿಟ್ಟುಕೊಡಬೇಕು.

೩. ಈಯುದ್ಧಕ್ಕಿಂತ ಮೊದಲು ಫತ್ತೆಸಿಂಗ ಗಾಯಕವಾಡನ ಕಡೆಗೆ ಇದ್ದಷ್ಟು ರಾಜ್ಯವು ಈಗಲೂ ಅವನ ಕಡೆಗೆ ಉಳಿಯುಬೇಕು. ಆದರೆ ಪೇಶ್ವೆಯು ಕಳೆದ ೬ ವರ್ಷಗಳ ಖಂಡಣಿಯುನ್ನು ಕೇಳಬಾರದು, ಮತ್ತು ಮುಂದೆ ಗಾಯಕವಾಡನು ಕಪ್ಪವನ್ನು ಕೊಡುವುದಲ್ಲದೆ ಮೊದಲಿನಂತೇ ಪೇಶ್ವೆಯು ಹೇಳಿದ ಕೆಲಸವನ್ನು ಮಾಡಬೇಕು.

೪. ಈಯೊಪ್ಪಂದದಿಂದ ೪ ತಿಂಗಳೊಳಗೆ ರಘುನಾಥರಾಯನು ಪೇಶ್ವೆಯ ಕಡೆಗೆ ಹೋಗಬೇಕು. ಅವನು ಹೋಗದಿದ್ದರೆ ಇಂಗ್ಲಿಷರು ಅವನಿಗೆ ತಮ್ಮ ರಾಜ್ಯದಲ್ಲಿ ಆಶ್ರಯಕೊಡಬಾರದು. ಅವನು ಸಿಂದೆಯನ ಆಸರಕ್ಕೆ ಹೋದರೆ ಪೇಶ್ವೆಯು ಅವನಿಗೆ ತಿಂಗಳಿಗೆ ೨೫೦೦೦ ರೂಪಾಯಿ ಕೊಡಬೇಕು. ಇದಲ್ಲದೆ ಯಾರಿಂದಲೂ ಅವನಿಗೆ ತ್ರಾಸವಾಗದಂತೆ ಏರ್ಪಾಡುಮಾಡಬೇಕು.

೫. ಪೇಶ್ವೆಯು ಹೈದರ ಅಲ್ಲಿಯಿಂದ ಅವನು ತೆಗೆದುಕೊಂಡ ಇಂಗ್ಲಿಷರ ಪ್ರಾಂತವನ್ನೂ ಆರ್ಕಾಟದ ನವಾಬನ ಪ್ರಾಂತವನ್ನೂ ತಿರುಗಿ ಕೊಡಿಸಬೇಕು.

೬. ಇಂಗ್ಲಿಷರೂ ಅವರ ಗೆಳೆಯರಾದ ಅರ್ಕಾಟ-ಅಯೋಧ್ಯೆಗಳ ನವಾಬರೂ, ಪೇಶ್ವೆಯೂ ಅವನ ಗೆಳೆಯರಾದ ಹೈದರ ಅಲ್ಲಿ ನಿಜಾಮು ಆಲ್ಲಿ ಭೋಸಲೆಯರೂ ಒಬ್ಬರು ಮತ್ತೊಬ್ಬರನ್ನು ನೋಯಿಸಬಾರದು.

೭. ಎರಡೂ ಪಕ್ಷದವರು ಈಯೊಪ್ಪಂದದ ಶರ್ತುಗಳನ್ನು ಪಾಲಿಸುತ್ತಾರೆಂಬ ಬಗ್ಗೆ ಮಹಾರಾಜ ಸುಬೇದಾರ ಮಾಧವರಾವ ಸಿಂದೆ ಬಹದ್ದೂರನು ಹೊಣೆಗಾರನಾಗಬೇಕು.

ಈಯೊಪ್ಪಂದದಿಂದ ರಘುನಾಥರಾಯನ ಆಟವು ಮುಗಿದಂತಾಯಿತು. ಆದ್ದರಿಂದ ಅವನು ನಿರುಪಾಯನಾಗಿ ಹೆಂಡತಿಮಕ್ಕ

ಕೊಡನೆ ಕೋಪರಗಾವದಲ್ಲಿ ಇರಲಾರಂಭಿಸಿದನು. ಆದರೆ ತಾನು ಸ್ವತಂತ್ರನಾಗಲಿಕ್ಕೆ ಮಾಡಿದ ಎಲ್ಲ ಪ್ರಯತ್ನಗಳು ವ್ಯರ್ಥವಾದವೆಂಬ ಹೃದ್ರೋಗದಿಂದ ನವಿದು ಅವನು ೧ ತಿಂಗಳಲ್ಲೇ ತೀರಿಕೊಂಡನು (ಶಕೆ ೧೭೦೫ ಮಾರ್ಗಶೀರ್ಷ ವದ್ಯ ೩). ಆಕಾಲಕ್ಕೆ ಆನಂದೀ ಬಾಯಿಯು ಬಸುರಿದ್ದಳು; ಮುಂದೆ ಆಗರ್ಭದಿಂದ **ಚಿಮಾಜಿ ಅಪ್ಪನು** ಹುಟ್ಟಿದನು.

ಈಕಾಲಕ್ಕೆ ನಾನಾನು ನಿರಂಕುಶನಾಗಿದ್ದನು. ಅವನ ವಿರೋಧಿಗಳಾದ ಸಖಾರಾಮ ಬಾಪು, ಚಿಂತೋ ವಿಟ್ಠಲ ಮುಂತಾದವರು ಪರಲೋಕವಾಸಿಗಳಾಗಿದ್ದರು, ಇಲ್ಲವೆ ಸೆರೆಮನೆಯಲ್ಲಿ ಕೊಳೆಯುತ್ತಿದ್ದರು. ಪೇಶ್ವೇನ ಮನೆಜಗಳದ ಮೂಲಕಾರಣವಾದ ರಘುನಾಥರಾಯನು ಪರಲೋಕವನ್ನೈಯ್ದಿದ್ದನು. ಚಿಕ್ಕ ಬಾಲಕನಾದ ಸವಾಯಿಮಾಧವರಾಯನೂ ಅವನ ತಾಯಿಯಾದ ಗಂಗಾಬಾಯಿಯೂ ನಾನಾನ ಅಂಕೆಯಲ್ಲೇ ಇದ್ದರು. ಇಂಗ್ಲಿಷರ ಯುದ್ಧವು ಮುಗಿದುದರಿಂದ ಪರಶತ್ರುಗಳ ಭಯವೇನೂ ಇದ್ದಿಲ್ಲ. ಈಯುದ್ಧದಲ್ಲಿ ಗಾಯಕವಾಡ-ಭೋಸಲೆಯವರು ಪೇಶ್ವೇರ ಕಟ್ಟನ್ನು ಬಿಟ್ಟು, ಇಂಗ್ಲಿಷರ ಪಕ್ಷವನ್ನು ಸ್ವೀಕರಿಸಿದರು. ಶಿಂದೇನು ಪೇಶ್ವೇನಿಂದ ಸ್ವತಂತ್ರನೆಂಬದನ್ನು ಜಾಣರಾದ ಇಂಗ್ಲಿಷರು ಸಾಲ್ಬಾಯಿಯೊಪ್ಪಂದದ ಕಲಮಿನಲ್ಲೇ ಯುಕ್ತಿಯಿಂದ ಕಾಣಿಸಿದ್ದರು. ಬಲು ಇಕ್ಕಟ್ಟಿನ ಪ್ರಸಂಗದಲ್ಲಿ ನಾನಾನಿಗೆ ಅನುಕೂಲನಾಗಿ ಇಂಗ್ಲಿಷರನ್ನು ಹೆದರಿಸಿ, ಪೇಶ್ವೇರಿಗೆ ಅನುಕೂಲವಾದ ಒಪ್ಪಂದದ ಶರ್ತುಗಳಿಗೆ ಇಂಗ್ಲಿಷರನ್ನು ಒಡಂಬಡಿಸಲಿಕ್ಕೆ ಕಾರಣೀಭೂತನಾದ ಹೈದರಅಲ್ಲಿಯು ಸಾಲ್ಬಾಯಿಯೊಪ್ಪಂದಕ್ಕೆ ಎರಡೂ ಪಕ್ಷದವರು ರುಜುಹಾಕುವದಕ್ಕಿಂತ ಮೊದಲೇ ಚಿತ್ತೂರಲ್ಲಿ ತೀರಿಕೊಂಡಿದ್ದನು. ಆದ್ದರಿಂದ ದೇವರು ಒದಗಿಸಿಕೊಟ್ಟ ಈಶಾಂತತೆಯ ಕಾಲದಲ್ಲಿ ನಾನಾನು ತನ್ನ ಕಯ್ಯಲ್ಲಿ ಬಂದ ಪೇಶ್ವೇರ ರಾಜ್ಯವನ್ನು ಸ್ಥಿರಗೊಳಿಸಲಿಕ್ಕೆ ಏನಾದರು ಹಂಚಿಕೆ ಮಾಡಿದನೋ ಇಲ್ಲೋ, ಪ್ರಜೆಗಳ ಹಿತದ ಕೆಲಸಗಳನ್ನು ಮಾಡಿದನೋ ಇಲ್ಲೋ, ಪೇಶ್ವೇರ ಕಟ್ಟಿನಿಂದ ಹೊರಗೆ

ಹೋದ ಸರದಾರರನ್ನು ತಿರುಗಿ ಕಟ್ಟಿನೊಳಗೆ ಸೇರಿಸಿಕೊಳ್ಳಲಿಕ್ಕೆ ಏನಾದರು ಪ್ರಯತ್ನ ಮಾಡಿದನೋ ಇಲ್ಲೋ, ಮತ್ತು ತನ್ನ ಹೊತ್ತಿಗಾದ ದೇಶೀಯರಸರ ಉಪಕಾರವನ್ನು ತೀರಿಸಲಿಕ್ಕೆ ಏನಾದರೂ ಎತ್ತುಗಡೆಮಾಡಿದನೋ ಇಲ್ಲೋ ಎಂಬದನ್ನು ನೋಡಬೇಕಾಗಿದೆ.

ನಾನಾನು ತನಗೆ ಮುಖ್ಯಾಧಾರವಾದ ಚಿಕ್ಕ ಪೇಶ್ವೇನ ಮೇಲೆ ಜೀವಾಕೊಡುತ್ತಿದ್ದನು. ಸವಾಯಿಮಾಧವರಾಯನು ೩ ವರ್ಷದವನಿದ್ದಾಗ ಅವನ ತಾಯಿಯಾದ ಗಂಗಾಬಾಯಿಯು ತೀರಿಕೊಂಡಳು (೧೬೯೯ ಆಷಾಢಶುದ್ಧ ೮). ಮುಂದೆ ನಾನಾನು ಶಕೆ ೧೭೦೧ರಲ್ಲಿ ಚಿಕ್ಕ ಪೇಶ್ವೇನ ಮುಂಜಿಯನ್ನೂ೧೭೦೪ರಲ್ಲಿ ಥತ್ತೆಮನೆತನದ ಹುಡುಗಿಯೊಡನೆ ಮದುವೆಯನ್ನೂಬಹುಸಮಾರಂಭದಿಂದ ಮಾಡಿಸಿದನು.

ಈಕಾಲಕ್ಕೆ ನಾನಾನು ಹಿಂದೆ ಆದ ಯುದ್ಧದಲ್ಲಿ ಮುರಿದು ಹೋದ ಪೇಶ್ವೇರ ಕಟ್ಟನ್ನು ಬಲಪಡಿಸಲಿಕ್ಕೆ ವಿಶ್ವಪ್ರಯತ್ನಮಾಡಿದ್ದರೆ, ಪೇಶ್ವೇನ ರಾಜ್ಯವು ಹೆಚ್ಚು ಸ್ಥಿರವಾಗುವ ಸಂಭವವಿತ್ತು. ಆಯುದ್ಧದಲ್ಲಿ ಮೇಲೆ ಬರೆದಂತೆ ಭೋಸಲೆಯು ಇಂಗ್ಲಿಷರಿಂದ ಲಂಚತೆಗೆದುಕೊಂಡು ತಟಸ್ಥನಾದನು. ಗಾಯಕವಾಡನಂತೂ ಇಂಗ್ಲಿಷರ ಪಕ್ಷಗಟ್ಟಿದನು; ಶಿಂದೆ ನಾನಾ ಇವರೊಳಗಾದರೂ ಪೂರ್ಣವಿಶ್ವಾಸವಿದ್ದಿಲ್ಲೆಂಬದು ಆಕಾಲದ ಅವರ ಪತ್ರವ್ಯವಹಾರದಿಂದಲೂ ನಡತೆಯಿಂದಲೂ ತಿಳಿಯುತ್ತದೆ. ಈಮೇರೆಗೆ ಪೇಶ್ವೇರ ಬಲವು ಕಟ್ಟುಹರಕು-ಪಂಜಾಗಿದ್ದುದನ್ನು ಸುಧಾರಿಸಿಕೊಳ್ಳಲಿಕ್ಕೆ ನಾನಾನು ಪ್ರಯತ್ನಮಾಡಿದ್ದರೆ ಒಳಿತಾಗುತ್ತಿತ್ತು. ಇಂಗ್ಲಿಷರು ನಿರುಪಾಯರಾಗಿ ಸಾಲ್ಬಾಯಿಯ ಒಪ್ಪಂದವನ್ನು ಮಾಡಿದರೆಂಬದೂ ಅವರು ಹೊತ್ತು ಸಿಕ್ಕಾಗ ಪೇಶ್ವೇರ ರಾಜ್ಯವನ್ನು ನುಂಗಲಿಕ್ಕೆ ಹೊಂಚುಹಾಕಿಕೊಂಡು ಕುಳಿತಿದ್ದರೆಂಬದೂ ಅವನಿಗೆ ಗೊತ್ತಿದ್ದ ಮಾತುಗಳೇ ಸರಿ. ಹೀಗಿದ್ದು ಅವನು ನಿಜಾಮ ಅಲ್ಲಿಯನ್ನು ಯಾತಗೇರಿಯೆಂಬಲ್ಲಿ ಕಂಡು (೧೭೦೬), ಇಂಗ್ಲಿಷರ ದ್ವೇಷಿಯೂ ತನಗೆ ಹೊತ್ತಿಗಾದ ಹೈದರ ಅಲ್ಲಿಯ ಮಗನೂ ಆದ ಟೀಪುಸುಲ್ತಾನನೊಡನೆ ಯುದ್ಧಹೂಡಬೇಕೆಂದು ನಿಶ್ಚಯಿಸಿದನು. ನಾನಾ-ಸು

ಲ್ತಾನರ ನಡುವಿದ್ದ ಅವಿಶ್ವಾಸವೂ ಸುಲ್ತಾನನ ಧರ್ಮಹಿಂಸೆಯೂ ಈಯುದ್ಧದ ಮುಖ್ಯಕಾರಣಗಳೆನ್ನಬಹುದು.

ಈವೊದಲು ಜಾಣರಾದ ಇಂಗ್ಲಿಷರಿಂದಾದರೂ ತುಸು ದಡ್ಡತನವಾಗಿತ್ತು. ಏಕಂದರೆ ಅವರು ಹೈದರ-ಅಲ್ಲಿ-ಟೀಪುಸುಲ್ತಾನರ ಹಾವಳಿಗೆ ಹೆದರಿ ಮರಾಟರೊಡನೆ ಒಪ್ಪಂದ ಮಾಡಿಕೊಂಡರು, ಮತ್ತು ಮರಾಟರ ಯುದ್ಧದಲ್ಲಿ ತೊಡಗಿದ ದಂಡು ಹೊತ್ತಿಗೆ ಬಂದು ಒದಗದ್ದರಿಂದ ಮದ್ರಾಸಸರಕಾರದವರು ಗಾಬರಿಯಾಗಿ ಸುಲ್ತಾನನೊಡನೆ ಮಂಗಳೂರಲ್ಲಿ ಒಪ್ಪಂದ ಮಾಡಿಕೊಂಡರು, ಆದ್ದರಿಂದ ಇಂಗ್ಲಿಷರು ತಾವು ಮಾಡಿದ್ದಕ್ಕೆ ಪಶ್ಚಾತ್ತಾಪಬಟ್ಟು ಸಂಧಿಸಿಕ್ಕರೆಯಾವದಾದರೊಂದು ಒಪ್ಪಂದ ಮುರಿಯಲಿಕ್ಕೆ ಹಾತೊರೆಯುತ್ತಿದ್ದರು. ಈಸಂಧಿಯನ್ನು ಮೈಸೂರಿನ ಹುಲಿಯೆಂದು ಕರೆಯಲ್ಪಡುತ್ತಿದ್ದ ಟೀಪುವು ತನ್ನ ಹುಂಬತನದಿಂದ ಬೇಗನೆ ತಂದು ಕೊಟ್ಟನು. ಅದು ಹೇಗಂದರೆ:—

ಮಂಗಳೂರಿನ ಒಪ್ಪಂದವಾದ ಕೂಡಲೆ ಟೀಪುಸುಲ್ತಾನನು ತನ್ನ ಮಾಂಡಲಿಕನೂ ನರಗುಂದದ ದೇಸಾಯಿಯೂ ಆದ ಕಲ್ಲಪ್ಪಯ್ಯನ ಮೇಲೆ ದಂಡೆತ್ತಿಹೋಗಿ, ಅವನಿಂದ ಹೆಚ್ಚು ಕಪ್ಪವನ್ನು ಬೇಡಿದನು. ಅದನ್ನು ಕೊಡಲಿಕ್ಕೆ ತ್ರಾಣವಿಲ್ಲದ್ದರಿಂದ ಅವನು ಪೇಶ್ವೇನ ಸಹಾಯವನ್ನು ಬೇಡಿದನು. ಆಗ ನಾನಾನು ಮೊದಲು ಸುಲ್ತಾನನಿಗೆ ಒಳ್ಳೆಯ ಮಾತಿನಿಂದ ಹೇಳಿನೋಡಿ, ಅದು ನಡೆಯದ್ದರಿಂದ ಪರಶುರಾಮಭಾವು ಪಟವರ್ಧನನೊಡನೆ ದೇಸಾಯಿಯ ಸಹಾಯಕ್ಕೆ ದಂಡನ್ನು ಕಳುಹಿದನು. ಆದರೆ ಸುಲ್ತಾನನು ಅದನ್ನು ಸೋಲಿಸಿದ್ದರಿಂದ, ನಾನಾನು ತುಕೋಜಿ ಹೋಳಕರನೊಡನೆ ದೊಡ್ಡ ದಂಡನ್ನು ಕಳುಹಿದನು. ಆಗ ಸುಲ್ತಾನನು ಹೆದರಿ, ಪೇಶ್ವೇಗೆ ತಾನು ಕೊಡತಕ್ಕ ಕಪ್ಪವನ್ನು ೨೭ ದಿವಸಗಳೊಳಗೇ ಕೊಡಲೊಪ್ಪಿ, ಆದಂಡು ಹೋದ ಕೂಡಲೆ ನರಗುಂದವನ್ನು ಹಿಡಿದುಕೊಂಡು, ಕಲ್ಲಪ್ಪಯ್ಯನನ್ನು ಸೆರೆಹಿಡಿದು, ಅವನ ಚೆಲುವೆಯಾದ ಮಗಳನ್ನು ತನ್ನರಮನೆಯಲ್ಲಿರಿಸಿಕೊಂಡು, ಉಳಿದ ಅವನ ಕುಟುಂ

ಬದವರನ್ನು ಕೊಲ್ಲಿಸಿಬಿಟ್ಟನು. ಈವಿಶ್ವಾಸಘಾತಕತನವು ನಾನಾನ ದ್ವೇಷವನ್ನು ಹೆಚ್ಚಿಸಿತು.

ಈಸಮಯಕ್ಕೆ ನಾನಾನು ಇಂಗ್ಲಿಷರನ್ನು ಕೂಡಿಕೊಂಡು ಸುಲ್ತಾನನೊಡನೆ ಯುದ್ಧಮಾಡಬೇಕೆಂದು ಬಹಳ ಪ್ರಯತ್ನಮಾಡಿದನು; ಆದರೆ ಧೂರ್ತರಾದ ಇಂಗ್ಲಿಷರು ಅವನ ಮಾತಿಗೊಡಂಬಡಲಿಲ್ಲ. ಆದ್ದರಿಂದ ಅವನು ನಿಜಾಮಅಲ್ಲಿ ಭೋಸಲೆ ಹೋಳಕರ ಇವರೆಲ್ಲರನ್ನು ಯಾತಗಿರಿಯೆಂಬಲ್ಲಿ ಒಟ್ಟುಗೂಡಿಸಿ, ಆದಂಡಿನೊಡನೆ ತಾನೂ ಹೊರಟನು. ಮೂರು ವಾರಗಳ ವರೆಗೆ ಮುತ್ತಿಗೆಯನ್ನು ತಾಳಿ ಬಾದಾವಿ ಕೋಟೆಯು ಪೇಶ್ವೇರ ಕಯ್ಸೇರಿತು.* ಬಳಿಕ ಕೂಡಿದ ದಂಡಿನ ಮುಖ್ಯದಳವಾಯಿಯಾದ ಹರಿಪಂತ ಫಡಕೆಯು ಸವಣೂರ ನವಾಬನನ್ನು ತನ್ನ ಕಡೆಗೆ ಮಾಡಿಕೊಂಡು, ಸಿರಹಟ್ಟಿ, ಗಜೇಂದ್ರಗಡ ಮುಂತಾದವುಗಳನ್ನು ಹಿಡಿದುಕೊಂಡನು. ಅಷ್ಟರಲ್ಲಿ ಇಂಗ್ಲಿಷರು ಸುಲ್ತಾನನೊಡನೆ ಯುದ್ಧಮಾಡುವ ಲಕ್ಷಣ ಕಂಡುದರಿಂದ ಸುಲ್ತಾನನು ೪೫ ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೂ ಬಾದಾವಿ-ನರಗುಂದ-ಕಿತ್ತೂರುಗಳನ್ನು ಪೇಶ್ವೇನಿಗೆ ಬಿಡಲಿಕ್ಕೂ ಒಡಂಬಟ್ಟು, ಒಪ್ಪಂದಮಾಡಿಕೊಂಡನು (ಶಕೆ ೧೭೦೯ ಚೈತ್ರಮಾಸ.)

ಮೇಲೆ ಹೇಳಿದಂತೆ ಇಂಗ್ಲಿಷರು ಈಕಾಲಕ್ಕೆ ಸುಲ್ತಾನನೊಡನೆ ಯುದ್ಧಮಾಡಬೇಕೆಂದು ನಿಶ್ಚಯಿಸಿ, ಎಲ್ಲ ಕಡೆಯಿಂದ ಮದ್ರಾಸಕ್ಕೆ ದಂಡನ್ನು ಕಳುಹಲಾರಂಭಿಸಿದರು. ಅವರು ನಿಜಾಮನ ಸಹಾಯವನ್ನು ಕೇಳಲು, ಅವನು ಕೊಡಲೊಪ್ಪಿದನು.

---

* ಈಮುತ್ತಿಗೆಯು ನಡೆದಾಗ ನಾನಾನು ಒಂದು ದಿನ ರಾತ್ರಿ ವೇಷಬದಲಿಸಿಕೊಂಡು, ಪಾಳಯವನ್ನು ನೋಡುತ್ತಾನೋಡುತ್ತಾ ಪಟವರ್ಧನನ ಡೇರೆಗೆ ಬಂದನು. ಅಲ್ಲಿ ಎಲ್ಲ ಪ್ರಮುಖಸರದಾರರು ಚತುರಂಗವನ್ನಾಡುತ್ತ ಕುಳಿತಿದ್ದರು. ಆಗ ಪಟವರ್ಧನನು ನಾನಾನ ಗುರುತು ಹಿಡಿದುದರಿಂದ ಎಲ್ಲ ಸರದಾರರು ಹೆದರಿ, ಮೂರು ದಿವಸ ವಿಶೇಷಪ್ರಯತ್ನಮಾಡಿ ಬಾದಾವಿಕೋಟೆಯನ್ನು ಹಿಡಿದುಕೊಂಡರಂತೆ. ಬಾದಾವಿಯು ಕಯ್ಸೇರಿದ ಬಳಿಕ ನಾನಾನು ಪುಣೆಗೆ ತಿರುಗಿಹೋದನು.

ಆದರೆ ನಾನಾನು ಈಕಟ್ಟನ್ನು ಸೇರಿದ್ದು ಸೋಜಿಗವಾದ ಮಾತೇ ಸರಿ. ಏಕಂದರೆ ಇಂಗ್ಲಿಷರು ಸುಲ್ತಾನನನ್ನು ಮುರಿಬಡಿದ ಕೂಡಲೆ ಉಳಿದವರಿಗೆ ಕಯ್ಯುಚ್ಚುವರೆಂಬ ವಿಚಾರವು ಅವನ ಮನಸ್ಸಿನಲ್ಲಿ ಇದಕ್ಕೂ ಮೊದಲೇ ಬಂದಿತ್ತು.

ಈಮೈಸೂರಿನ ೨ನೆಯ ಯುದ್ಧವನ್ನು ಬೇರೆ ಕಡೆಯಲ್ಲಿ* ವಿವರಿಸಿರುವುದರಿಂದ ಇಲ್ಲಿ ಅದರ ಸಂಬಂಧದಿಂದ ಹೆಚ್ಚಿಗೆ ಬರೆಯುವದು ಅವಶ್ಯ ತೋರುವದಿಲ್ಲ. ಈಯುದ್ಧಕ್ಕಿಂತ ಮೊದಲು ನಾನಾ—ಇಂಗ್ಲಿಷರ ನಡುವೆ ಪುಣೆಯಲ್ಲಿ ಒಪ್ಪಂದವಾಯಿತು (ಶಕೆ ೧೭೧೨ ಜ್ಯೇಷ್ಠಮಾಸ). ಈಯೊಪ್ಪಂದದಂತೆ ನಾನಾನು ಪೇಶ್ವೇನ ದಂಡನ್ನು ಇಂಗ್ಲಿಷರೊಡನೆ ಶ್ರೀರಂಗಪಟ್ಟಣಕ್ಕೆ ಕಳುಹಿದನು. ಮರುವರುಷ ಮಹಾದಾಜಿ ಶಿಂದೆಯು ಮೋಗಲ್‌ಬಾದಶಹನನ್ನು ತನ್ನ ಅಂಕಿತನನ್ನು ಮಾಡಿಕೊಂಡು, ದಂಡಿನೊಡನೆ ಪುಣೆಗೆ ಬರುತ್ತಾನೆಂಬ ಸುದ್ದಿಯನ್ನು ಕೇಳಿ, ನಾನಾನು ಹೆದರಿ, ಶ್ರೀರಂಗಪಟ್ಟಣದಲ್ಲಿದ್ದ ಪೇಶ್ವೇನ ದಳವಾಯಿಯಾದ ಹರಿಪಂತ ಫಡಕೇನಿಗೆ ಬೇಗನೆ ಯುದ್ಧಮುಗಿಸಿ ಬರಲಿಕ್ಕೆ ಕಾಗದಬರೆದನು. ಈ ಹರಿಪಂತನ ಮಧ್ಯಸ್ಥಿಕೆಯಿಂದ ಸುಲ್ತಾನನಿಗೂ ಇಂಗ್ಲಿಷರಿಗೂ ಒಪ್ಪಂದವಾಯಿತು (ಶಕೆ ೧೭೧೩ ಮಾಘವದ್ಯ ೫). ಈಯೊಪ್ಪಂದದಿಂದ ಪೇಶ್ವೇನಿಗೆ ಕೃಷ್ಣಾ-ವರ್ಧಾನದಿಗಳ ನಡುವಿನ ಪ್ರದೇಶವೂ ೫೦ ಲಕ್ಷ ರೂಪಾಯಿಗಳೂ ದೊರಕಿದವು.

ನಾನಾನ ಅಪ್ಪಣೆಯಂತೆ ಹರಿಪಂತನು ಶಕೆ ೧೭೧೪ ಚೈತ್ರಮಾಸದಲ್ಲಿ ಪುಣೆಗೆ ಬಂದು ಮುಟ್ಟಿದನು; ಮಹಾದಾಜಿಶಿಂದೆಯು ಮುಂದೆ ೨ ತಿಂಗಳ ಮೇಲೆ ಅಂದರೆ ಜ್ಯೇಷ್ಠಮಾಸದಲ್ಲಿ ಪುಣೆಗೆ ಬಂದು ಸಂಗಮದ ಮೇಲೆ ಇಳಕೊಂಡನು. ಅವನು ಬರುವಾಗ ಮೋಗಲ್‌ಬಾದಶಹನಿಂದ ಮಹಾರಾಜಾಧಿರಾಜನೆಂಬ ಬಿರುದನ್ನೂ ವಸ್ತ್ರಗಳನ್ನೂ ಪೇಶ್ವೇನಿಗೆ ಕೊಡಲಿಕ್ಕೆ ತಂದಿದ್ದನು. ಆದ್ದರಿಂದ ಅವನು ಆಷಾಢಶುದ್ಧ ತ್ರಯೋದಶಿಯ ದಿವಸ ಈಬಿರು

* ಮುಂದೆ ಕೊಟ್ಟ ಟೀಪುಸುಲ್ತಾನನ ಚರಿತ್ರ ನೋಡಿರಿ.

ದನ್ನೂ ವಸ್ತ್ರಗಳನ್ನೂ ಬಹುಸಮಾರಂಭದಿಂದ ಪ್ರಾಯದ ಪೇಶ್ವೇನಿಗೆ ಅರ್ಪಿಸಿದನು.*

ಈಸಮಾರಂಭವಾದ ಬಳಿಕ ಮಹದಾಜಿಯು ತನ್ನ ರಾಜ್ಯಕ್ಕೆ ಹೋಗದೆ ಪುಣೆಯಲ್ಲೇ ನಿಂತುಕೊಂಡನು. ಅವನ ಮನಸ್ಸಿನಲ್ಲಿ ತನ್ನ ಉತ್ತರಹಿಂದುಸ್ಥಾನದ ದಂಡಯಾತ್ರೆಯ ವೆಚ್ಚವನ್ನು ಪೇಶ್ವೇನು ಕೊಡಬೇಕೆಂಬದಿತ್ತು. ಆದರೆ ನಾನಾನು ಈಮಾತಿಗೊಪ್ಪಲಿಲ್ಲ. ಆದಕಾರಣ ಮಹಾದಾಜಿಯು ಪೇಶ್ವೇನ ರಾಜಕಾರ್ಯವನ್ನು ನಾನಾನಿಂದ ಬಿಡಿಸಿ ತನ್ನ ಕಯ್ಯಲ್ಲೇ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಸವಾಯಿಮಾಧವರಾಯನ ಒಲುಮೆಯನ್ನು ಸಂಪಾದಿಸಲಿಕ್ಕೆ ಎತ್ತುಗಡೆಮಾಡಲಾರಂಭಿಸಿದನಂತೆ. ಆದರೆ ಕೃತಜ್ಞನಾದ ಪೇಶ್ವೇನು ಅವನ ಬಿನ್ನಹವನ್ನು ಆಲಿಸಲಿಲ್ಲವಂತೆ. ಮುಂದೆ ತುಸು ದಿವಸದಲ್ಲೇ ಮಹಾದಾಜಿಯು ವನವಾಡಿಯೆಂಬಲ್ಲಿ ಸವಜ್ವರದಿಂದ ಮಡಿದನು (ಶಕೆ ೧೭೧೫ ಮಾಘಶುದ್ಧ ೧೩).†

ನಮ್ಮ ಜನರಲ್ಲಿ ಪರಕೀಯರ ಭಯವು ಹೋದಕೂಡಲೆ ತಂತಮ್ಮೊಳಗೆ ಜಗಳಾಡಿ ಆತ್ಮಘಾತವನ್ನು ಮಾಡಿಕೊಳ್ಳುವ ದುರ್ಗುಣವು ಬಹುದಿವಸದಿಂದ ನೆಲೆಗೊಂಡಿರುತ್ತದಷ್ಟೇ. ಈಗುಣಕ್ಕನುಸರಿಸಿ ಇಂಗ್ಲಿಷ-ಸುಲ್ತಾನರೊಡನೆ ನಡೆದ ಯುದ್ಧಗಳು ಮುಗಿದ ಕೂಡಲೆ ಪೇಶ್ವೆ-ನಿಜಾಮಅಲ್ಲಿಗಳೊಳಗೆ ಯುದ್ಧವಾರಂಭವಾಯಿತು. ನಿಜಾಮಅಲ್ಲಿಯು ಪೇಶ್ವೇನಿಗೆ ಕೊಡಬೇಕಾದ ಹಿಂದಿನ ೧೦ ವರ್ಷಗಳ ಕಪ್ಪವು ಬರಲಿಲ್ಲೆಂತಲೂ ಒಂದು ದಿನ ಸವಾಯಿಮಾಧವರಾವ, ನಾನಾ ಇವರ ಸೋಗುಗಳು ನಾಟಕದಲ್ಲಿ ಬಂದವೆಂತಲೂ ಪೇಶ್ವೇನು ಸಿಟ್ಟಾದನು. ಪೇಶ್ವೇನು ನಿಜಾಮನ ರಾಜ್ಯಕ್ಕೆ ಸೇರಿದ

---

* ಶಿಂದೇನ ಈಯಾಲೋಚನೆಗೆ ನಾನಾನು ಸಾತಾರೆಯ ಮಹಾರಾಜನಿಗೆ ಸಿಟ್ಟುಬರಬಹುದೆಂದು ಅಡ್ಡಿ ತೋರಿಸಿದನು. ಅದ್ದರಿಂದ ಮಹಾದಾಜಿಯು ಮಹಾರಾಜನ ಅಪ್ಪಣೆಯನ್ನು ತರಿಸಿ ಪೇಶ್ವೇನಿಗೆ ಬಿರುದನ್ನು ಅರ್ಪಿಸಿದನು.

† ಮುಂದೆ ಶಕೆ ೧೭೧೬ ಜ್ಯೇಷ್ಠಮಾಸದಲ್ಲಿ ಹರಿಪಂತಫಡಕೆಯು ಹೊಟ್ಟೆಸೂಲೆಯ ಬೇನೆಯಿಂದ ತೀರಿಕೊಂಡನು.

ವಿಜಾಪುರ-ಖಾನದೇಶಗಳನ್ನು ತೆಗೆದುಕೊಂಡನೆಂದು ನಿಜಾಮು ಅಲ್ಲಿಯು ಮುನಿದನು. ಆದ್ದರಿಂದ ನಾನಾನು ಚಿಕ್ಕಪೇಶ್ವೇನ ಸಂಗಡ ಕರೆದುಕೊಂಡು, ಶಿಂದೇನ ಮುಖ್ಯ ದಳವಾಯಿಯಾದ ಜಿವುಬಾದಾದಾ, ಹೋಳಕರ, ಭೋಸಲೆ, ಗಾಯಕವಾಡ, ಪಟವರ್ಧನ, ರಾಸ್ತೆ, ಪ್ರತಿನಿಧಿ, ಪಾಟಣಕರ, ನಿಂಬಾಳಕರ, ಘೋರಪಡೆ, ಭೋಯಿಟೆ, ಥೋರಾತ, ಮುಂತಾದವರ ದಂಡುಗಳೊಡನೆ ನಿಜಾಮುನ ರಾಜ್ಯವನ್ನು ಹೊಕ್ಕನು. ಪೇಶ್ವೇನ ದಂಡು ಒಟ್ಟು ಒಂದುವರೆ ಲಕ್ಷವಿತ್ತು. ಆರಂಭಕ್ಕೆ ಪರಾಂಡೆಯ ನೆರೆಯಲ್ಲಾದ ಕದನಗಳಲ್ಲಿ ಪೇಶ್ವೇರ ಮುಖ್ಯದಳವಾಯಿಯಾದ ಪಟವರ್ಧನನೂ ಹರಿಪಂತನ ಮಗನಾದ ಬಾಬಾಫಡಕೆಯೂ ಸೋತರೆಂಬ ಸುದ್ದಿಯನ್ನು ಕೇಳಿ, ನಾನಾನು ಹೆದರಿ, ಜಿವುಬಾದಾದಾನಿಗೆ ಕಾಗದ ಬರೆದನು. ಬಳಿಕ ಪೇಶ್ವೆಯ ದಂಡು ನಿಜಾಮುನನ್ನು ಬೆನ್ನಟ್ಟಲು ಅವನು ಖರಡೆಯ ಕೋಟೆಯನ್ನು ಹೊಕ್ಕನು, ಮತ್ತು ಮರಾಟರು ಅದನ್ನು ಮೂರು ದಿವಸ ಮುತ್ತಿದ ಬಳಿಕ ಕೆಳಗೆ ಬರೆದ ಶರತುಗಳಂತೆ ಒಪ್ಪಂದಮಾಡಿಕೊಂಡನು.

೧. ನಿಜಾಮುನು ಪರಾಂಡೆಯಿಂದ ತಾಪೀನದಿಯ ವರೆಗೆ ತನ್ನ ವಶದಲ್ಲಿದ್ದ ಎಲ್ಲ ಪ್ರದೇಶವನ್ನು (ದೌಲತಾ್ತಬಾದ ಸಹಿತ) ಪೇಶ್ವೇನಿಗೆ ಬಿಟ್ಟುಕೊಡಬೇಕು.

೨. ಯುದ್ಧದ ವೆಚ್ಚಕ್ಕಾಗಿಯೂ ಚೌಥ-ಸರದೇಶಮುಖಿಯ ಬಗ್ಗೆಯೂ ನಿಜಾಮುನು ೩ ಕೋಟಿ ರೂಪಾಯಿ ಕೊಡಬೇಕು.

೩. ನಿಜಾಮುನು ವರ್ಷಕ್ಕೆ ೩ ಲಕ್ಷ ೧೮ ಸಾವಿರ ರೂಪಾಯಿ ಉತ್ಪನ್ನವಾಗುವ ಪ್ರಾಂತವನ್ನೂ ೨೯ ಲಕ್ಷ ರೂಪಾಯಿಗಳನ್ನೂ ರಘೋಜಿ ಭೋಸಲೇನಿಗೆ ಕೊಡಬೇಕು.

ಈಯೊಪ್ಪಂದವಾದ ಬಳಿಕ ಸವಾಯಿ-ಮಾಧವರಾಯನು ಬಹಳ ದಿವಸ ಬಾಳಲಿಲ್ಲ. ಈಕಾಲಕ್ಕೆ ನಾನಾನು ರಘುನಾಥರಾಯನ ಹಿರಿಮಗನಾದ ಬಾಜಿರಾಯನನ್ನೂ ಅವನಿಬ್ಬರು ತಮ್ಮಂದಿರನ್ನೂ ಶಿವನೇರಿಯ ಕೋಟೆಯಲ್ಲಿ ಕಾವಲಲ್ಲಿರಿಸಿದ್ದನು. ಈಬಾಜಿ

ರಾಯನು ಚೆಲುವನೂ ಸವಿಮಾತಿನವನೂ ಆದ್ದರಿಂದ ರಘುನಾಥ ರಾಯನ ಪಕ್ಷದ ಜನರು ಅವನನ್ನು ಎಡೆಬಿಡದೆ ಹೊಗಳಲಾ ರಂಭಿಸಿದರು. ಈಹೊಗಳಿಕೆಯು ಪೇಶ್ವೇನ ಕಿವಿಗೆ ಬಾರಿಬಾರಿಗೆ ಬಿದ್ದುದರಿಂದ ಅವನ ಮನಸ್ಸಿನಲ್ಲಿ ಬಾಜಿರಾಯನನ್ನು ಸೆರೆಯಿಂದ ಬಿಡಿಸಿ, ತನ್ನ ಹತ್ತರ ಇಟ್ಟುಕೊಳ್ಳಬೇಕೆಂಬ ಉತ್ಕಟೇಚ್ಛೆಯು ಹುಟ್ಟಿತು. ಆದರೆ ನಾನಾನು ಈಯಾಲೋಚನೆಗೆ ಕಿವಿಗೊಡ ಲಿಲ್ಲ. ಈಸಂಗತಿಯಿಂದ ಪೇಶ್ವೇನ ಬುದ್ಧಿಯೇ ಕೆಟ್ಟಿತು. ಮುಂದೆ ದಸರೆಯ ದಿವಸ ಮೆರವಣಿಗೆಯು ಹೊರಟಾಗ, ಅವನು ಅಂಬಾರಿ ಯಿಂದ ಕೆಳಗೆ ಹಾರಿಕೊಂಡನು; ದೈವಯೋಗದಿಂದ ಹತ್ತರಿದ್ದ ಜನರು ಅವನನ್ನು ಹಿಡಿದುದರಿಂದ ಅವನಿಗೆ ಅಪಾಯವೇನೂ ಆಗ ಲಿಲ್ಲ. ಮುಂದೆ ಮೂರನೆಯ ದಿವಸ ಅಂದರೆ ಆಶ್ವಿನ ಶುದ್ಧ ದ್ವಾದಶೀ ಆದಿತ್ಯವಾರ ದಿವಸ ೯ ಗಂಟೆಗೆ ಅವನು ತನ್ನ ಹತ್ತರ ಒಬ್ಬರೂ ಇಲ್ಲದ್ದನ್ನು ನೋಡಿ ಉಪ್ಪರಿಗೆಯ ಮೇಲಿಂದ ಕೆಳಗೆ ಹಾರಿಕೊಂಡನು. ಕೆಳಗಿದ್ದ ಕಾರಂಜಿಯು ತೊಡೆಯಲ್ಲಿ ಸಿಕ್ಕು ಅವನ ತೊಡೆಯು ಮುರಿಯಿತು, ಮತ್ತು ಗೋಣು ಸೊಟ್ಟಾ ಯಿತು. ನಾನಾನು ಎಷ್ಟು ಉಪಚಾರ ಮಾಡಿಸಿದರೂ ನೆಟ್ಟಗಾ ಗಲಿಲ್ಲ; ಮುಂದೆ ಅವನು ಹುಣ್ಣಿವೆಯ ದಿವಸ ಸಂಜೆಗೆ ಪ್ರಾಣ ಬಿಟ್ಟನು (ಶಕೆ ೧೭೧೭).

ಈದುರ್ಮರಣದಿಂದ ನಾನಾನ ಕಯ್ಮುರಿದಂತಾಯಿತು; ಅವ ನ ಮುಖ್ಯಾಧಾರವು ಹೋಯಿತು. ಸವಾಯಿಮಾಧವರಾಯನೊ ಡನೆ ಅವನ ಬುದ್ಧಿಯೂ ಸಂಪತ್ತೂ ದೊಡ್ಡಿಸ್ತನವೂ ಹೋದವೆಂದ ರೂ ಅಡ್ಡಿಯಿಲ್ಲ. ಈಕಾಲಕ್ಕೆ ರಘುನಾಥರಾಯನ ಮಕ್ಕಳಾದ **ಬಾಜಿರಾವ, ಚಿಮಾಜಿಅಪ್ಪಾ** ಇವರಿಬ್ಬರ ಹೊರತು ಪೇಶ್ವೇನ ವಂ ಶದವರು ಮತ್ತೆಯಾರೂ ಉಳಿದಿದ್ದಿಲ್ಲ. ಇವರಿಬ್ಬರೂ ನಾನಾನ ಕಡುಹಗೆಗಳಾಗಿದ್ದರೆಂಬದಕ್ಕೆ ಸಂಶಯವೇ ಇಲ್ಲ. ಆದ್ದರಿಂದ ನಾನಾನು ಸವಾಯಿ-ಮಾಧವರಾಯನ ಹೆಂಡತಿಯಾದ **ಯಶೋ ದಾಬಾಯಿಗೆ** ಒಬ್ಬ ಗೋತ್ರಜನನ್ನು ದತ್ತಕಕೊಟ್ಟು ಆದತ್ತಕ

ಮಗನಿಗೆ ಪೇಶ್ವೇನ ವಸ್ತ್ರಗಳನ್ನು ಕೊಡಿಸಿ, ತಾನು ಮೊದಲಿನಂತೆ ರಾಜಕಾರ್ಯವನ್ನು ನಡಿಸಬೇಕೆಂದು ಆಲೋಚಿಸಿ, ಪುಣೆಯಲ್ಲೇ ಇದ್ದ ಹೋಳಕರನನ್ನೂ ಪರಶುರಾಮ-ಭಾವು ಪಟವರ್ಧನನನ್ನೂ ತನ್ನ ಮತಕ್ಕೊಲಿಸಿಕೊಂಡು, ಶಿಂದೆ-ಭೋಸಲೇರಿಗೆ ಈಸಂಬಂಧ ದಿಂದ ವಿಚಾರಮಾಡಲಿಕ್ಕೆ ಬೇಗನೆ ಹೊರಟು ಬರಬೇಕೆಂದು ಕಾಗದ-ಬರೆದನು. ಕೂಡಲೆ ಶಿಂದೆಯು ಅಲ್ಪವಯಸ್ಕನಾದ ಕಾರಣ, ಅವನ ರಾಜ್ಯಪಾಲಕರಾದ ಜಿವುಬಾದಾದಾ ಬಕ್ಷಿಯೂ ಬಾಳೋಬಾ ತಾತ್ಯಾ ಪಾಗನೀಸನೂ ಭೋಸಲೆಯೂ ಪುಣೆಗೆ ಬಂದರು (ಕಾರ್ತಿಕಮಾಸ). ಇವರೊಳಗೆ ಬಾಳೋಬನ ಹೊರತು ಉಳಿದವರೆಲ್ಲರೂ ನಾನಾನ ಆಲೋಚನೆಗೆ ಒಪ್ಪಿಕೊಂಡರು; ಮುಂದೆ ಬಾಳೋಬನಾದರೂ ಹೋಳಕರನ ಹೇಳಿಕೆಯಿಂದ ಅನುಮತಿಕೊಟ್ಟನು. ಬಳಿಕ ಎಲ್ಲ ಸರದಾರರು ಈಯರ್ಥದ ಪತ್ರವನ್ನು ಯಶೋದಾಬಾಯಿಗೆ ಬರೆದು ತಂತಮ್ಮ ನಾಡುಗಳಿಗೆ ಹೊರಟುಹೋದರು.

ಈಯೆಲ್ಲ ಸುದ್ದಿಯು ಶಿವನೇರಿಯಲ್ಲಿದ್ದ ಬಾಜಿರಾಯನಿಗೆ ತಿಳಿಯಲು, ಅವನು ಬಾಳೋಬನೊಡನೆ ಪತ್ರವ್ಯವಹಾರನಡಿಸಿ, ಶಿಂದೇನು ತನ್ನನ್ನು ಪಟ್ಟದ ಮೇಲೆ ಕೂಡ್ರಿಸಬೇಕೆಂತಲೂ ತಾನು ಅದಕ್ಕಾಗಿ ದಂಡಿನ ವೆಚ್ಚವನ್ನೂ ೪ ಲಕ್ಷದ ಉಂಬಳಿಯನ್ನೂ ಕೊಡಬೇಕೆಂತಲೂ ಗೊತ್ತುಮಾಡಿಕೊಂಡನು. ಈಸುದ್ದಿಯು ಕೂಡಲೆ ನಾನಾನಿಗೆ ತಿಳಿಯಿತು. ಆಗಲವನು ಹೆದರಿ ಬಾಜಿರಾಯನನ್ನು ಪಟ್ಟದ ಮೇಲೆ ಕೂಡ್ರಿಸಬೇಕೆಂದು ನಿಶ್ಚಯಿಸಿ, ಮೊದಲಿನ ಆಲೋಚನೆಯನ್ನು ಬಿಟ್ಟು, ಬಾಜಿರಾಯನನ್ನೂ ತಾಸಗಾವಿಯಿಂದ ಪಟವರ್ಧನನನ್ನೂ ಕರಿಸಿಕೊಂಡು, ಬಾಜಿರಾಯನಿಂದ ತನ್ನನ್ನೇ ಕಡೆತನಕ ಮುಖ್ಯಮಂತ್ರಿಯನ್ನು ಮಾಡಿಕೊಳ್ಳಬೇಕೆಂದು ವಚನತೆಗೆದುಕೊಂಡು, ಅವನನ್ನು ಪುಣೆಗೆ ಕರಿಸಿದನು. ಈವರ್ತಮಾನವು ತಿಳಿದ ಕೂಡಲೆ ಬಾಳೋಬನು ಸಿಟ್ಟಿಗೆದ್ದು, ನಾನಾ-ಬಾಜಿರಾವ ಇವರಿಬ್ಬರನ್ನು ದಂಡಿಸುವ ಉದ್ದೇಶದಿಂದ ದೊಡ್ಡ ದಂಡಿನೊಡನೆ ಹೊರಟು ಪುಣೆಯ ಹತ್ತರವಿದ್ದ ಕವಡಿಯೆಂಬ ಊರಲ್ಲಿ ಪಾಳಯ

ಹಾಕಿದನು. ಈಸುದ್ದಿಯನ್ನು ಕೇಳಿ ಅಳ್ಳೆದೆಯ ನಾನಾನು ಪಟ ವರ್ಧನನ ಧೈರ್ಯದ ಮಾತುಗಳಿಗೆ ಕಿವಿಗೊಡದೆ ಫಾಲ್ಗುಣ ಶುದ್ಧ ಚತುರ್ದಶೀ ದಿವಸ ರಾತ್ರಿ ಸಾತಾರೆಗೆ ಓಡಿಹೋಗಿ, ಅಲ್ಲಿದ್ದ ಮಹಾರಾಜನಿಗೆ ಬೇಡಿಕೊಂಡದ್ದೇನಂದರೆ:—"ಮಹಾರಾಜರೇ ಈಪ್ರಸಂಗದಲ್ಲಿ ತಾವು ಟೊಂಕಕಟ್ಟಿ ದಂಡು ಕೂಡಿಸಿ ಶಿಂದೇನನ್ನು ಪುಣೆಯಿಂದೋಡಿಸಿ, ಯಶೋದಾಬಾಯಿಯ ದತ್ತಕಪುತ್ರನಿಗೆ ಪೇಶ್ವೇನ ವಸ್ತ್ರಗಳನ್ನು ಕೊಟ್ಟರೆ ತಮ್ಮ ಕೀರ್ತಿಯು ದಿಗಂತರದಲ್ಲಿ ಹಬ್ಬುವದು. ತಾವು ಹೀಗೆ ಮಾಡಲಿಕ್ಕೊಡಂಬಟ್ಟರೆ ತಮಗೆ ವೆಚ್ಚಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಈಕ್ಷಣವೇ ತಮ್ಮ ಮುಂದೆ ಎಣಿಸಿಕೊಡಲಿಕ್ಕೆ ಸಿದ್ಧನಿದ್ದೇನೆ". ಆದರೆ ಪೇಶ್ವೇನ ವಂಶದವರು ಇರುತಿರಲಿಕ್ಕೇ ಎರಡನೆಯವನನ್ನು ದತ್ತಕತೆಗೆದುಕೊಳ್ಳುವುದು ಮಹಾರಾಜನಿಗೆ ಸರಿದೋರದ್ದರಿಂದ, ನಾನಾನು ಭಗ್ನಮನೋರಥನಾಗಿ ಮುಂದೆ ತನ್ನ ಹಾಡು ಏನಾಗುತ್ತದೋ ಎಂದು ಉಮ್ಮಳಿಸುತ್ತ ಕಾಲಕಳೆಯಲಾರಂಭಿಸಿದನು.

ಅತ್ತ ಬಾಳೋಬನು ದಂಡಿನೊಡನೆ ಪುಣೆಗೆ ಬಂದು ತನ್ನನ್ನು ವಂಚಿಸಿದ ಬಾಜಿರಾಯನನ್ನು ಕಾವಲಲ್ಲಿರಿಸಿ, ನಾನಾನ ನಂಬಿಗಸ್ಥರಾದ ಪರಶುರಾಮ-ಭಾವು ಪಟವರ್ಧನನ್ನೂ ಬಹಿರೋಪಂತ ಮೇಂಧಳೇನನ್ನೂ ತನ್ನ ಕಡೆಗೆ ಮಾಡಿಕೊಂಡು, ಚಿಮಾಜಿ ಅಪ್ಪನನ್ನು ಯಶೋದಾಬಾಯಿಯ ದತ್ತಕಮಗನನ್ನು ಮಾಡಿ, ಅವನಿಗೆ ನಾನಾನ ವಿದ್ಯಮಾನವಾಗಿ ಪೇಶ್ವೇನ ವಸ್ತ್ರಗಳನ್ನು ತರಿಸಿಕೊಟ್ಟನು. ಬಳಿಕ ಬಾಳೋಬನು ಆಲೋಚನೆಯನ್ನು ಕೇಳುವ ನೆವದಿಂದ ನಾನಾನನ್ನು ಹಿಡಿಯ ಬೇಕೆಂದು ನಿಶ್ಚಯಿಸಿ ಬಹಿರೋಪಂತ ಮೇಂಧಳೆ, ಏಸಾಜಿಪಂತ ವಾಡವೇಕರ ಎಂಬಿಬ್ಬರನ್ನು ದಂಡಿನೊಡನೆ ಸಾತಾರೆಗೆ ಕಳುಹಿದನು. ಅವರು ನಾನಾನನ್ನು ಕಂಡು ಮಾತಾಡುತ್ತ ಕುಳಿತಿರುವಾಗ ವಾಡವೇಕರನು ತನ್ನ ಕಿವಿಯ ಮೇಲೆ ಜನಿವಾರವನ್ನು ಹಾಕಿಕೊಂಡು ಸನ್ನೆ ಮಾಡಲು, ನಾನಾನು 'ಈಗ ಬಂದೆ', ಎಂದು ಹೇಳಿ ಒಳಗೆ ಹೋಗಿ ಹಿತ್ತಲುಬಾಗಿಲಿಂದ

ವಾಯಿಗೆ ಓಡಿಹೋದನು. ಪಟವರ್ಧನನ ಮಗನು ಅಲ್ಲಿಗೆ ಹಿಡಿಯಲಿಕ್ಕೆ ಬರಲು ಅವನು ಪ್ರತಾಪಗಡಕ್ಕೆ ಓಡಿಹೋದನು (೧೭೯೯).

ಈಕಾಲಕ್ಕೆ ನಾನಾನೂ ಬಾಜಿರಾಯನೂ ಸಮದುಃಖಿಗಳಾಗಿದ್ದರು. ನಾನಾನ ಮಂತ್ರಿಪದವು ಹೋಗಿತ್ತು, ಮತ್ತು ಬಾಜಿರಾಯನ ಗಾದಿ ತಪ್ಪಿತ್ತು. ಇಷ್ಟೇ ಅಲ್ಲ, ಆದರೆ ಇಬ್ಬರೂ ಸೆರೆಯಾಳಾಗಿ ತಂತಮ್ಮ ಉಳಿದ ಆಯುಷ್ಯವನ್ನು ಕಳೆಯುವ ಪ್ರಸಂಗವೊದಗಿತ್ತು. ಆದ್ದರಿಂದ ಅವರಿಬ್ಬರು ತಂತಮ್ಮ ದ್ವೇಷವನ್ನು ಮರೆತು, ಒಟ್ಟುಗೂಡಿ ಬಾಳೋಬಾ-ಪರಶುರಾಮಭಾವುಗಳ ಪಾರಪತ್ಯ ಮಾಡಲಿಕ್ಕೆ ಒಳಸಂಚು ನಡಿಸಿದರು. ನಾನಾನು ಬಾಜಿರಾಯನಿಗೆ ಕೆಲಹಣವನ್ನು ಕಳುಹಿಕೊಟ್ಟನು. ಆದರೆ ಆ-ಅವಿಚಾರಿಯಾದ ಬಾಜಿರಾಯನು ಮುಚ್ಚು ಮರೆಮಾಡದೆ, ದಂಡುಕೂಡಿಸಲಾರಂಭಿಸಿದ್ದರಿಂದ ಬಾಳೋಬಾ-ಪಟವರ್ಧನರಿಗೆ ಸಂಶಯ ಬಂದು, ನಾನಾನಿಗೆ ಅನುಕೂಲವಾದ ತಮ್ಮ ಕಯ್ಕೆಳಗಿನ ಎಲ್ಲ ಜನರನ್ನು ಕೆಲಸದಿಂದ ದೂರ ಮಾಡಿದ್ದಲ್ಲದೆ ಬಾಜಿರಾಯನನ್ನು ಸರ್ಜೆರಾವ ಘಾಟಗೆ ಎಂಬ ಸರದಾರನ ವಶದಲ್ಲಿ ಕೊಟ್ಟು, ಅವನನ್ನು ಉತ್ತರ ಹಿಂದುಸ್ಥಾನಕ್ಕೆ ಕಳುಹಿದರು.

ಆದರೆ ದೈವಯೋಗದಿಂದ ಈ-ಘಾಟಗೆಯು ನಾನಾನಿಗೆ ಅನುಕೂಲವಾಗಿದ್ದನು; ಮತ್ತು ಅವನ ಕಯ್ಯಲ್ಲೇ ಈಕಾಲಕ್ಕೆ ದೌಲತ್ತರಾವ ಶಿಂದೆ ಇದ್ದನೆಂದು ಹೇಳಬಹುದು; ಏಕಂದರೆ, ಅವನಿಗೆ ಬಲು ಚೆಲುವೆಯಾದ ಒಬ್ಬ ಮಗಳಿದ್ದಳು, ಮತ್ತು ಶಿಂದೇನ ಮನಸ್ಸಿನಲ್ಲಿ ಆಕೆಯನ್ನು ಮದುವೆ ಮಾಡಿಕೊಳ್ಳುವದಿತ್ತು. ಆದ್ದರಿಂದ ನಾನಾನು ಅವನ ಮಧ್ಯಸ್ಥಿಕೆಯಿಂದ ೧೦ ಲಕ್ಷದ ಉಂಬಳಿಯನ್ನೂ ಅಹಮ್ಮದನಗರದ ಕೋಟೆಯನ್ನೂ ಪಟವರ್ಧನನ ಜಹಗೀರನ್ನೂ ಕೊಡುವ ಶರ್ತಿನ ಮೇಲೆ ಶಿಂದೇನನ್ನು ಒಡಕೊಂಡಿದ್ದನು. ಬಾಜಿರಾಯನಾದರೂ ಅವನಿಗೆ ಶಿಂದೇನ ದಿವಾಣಗಿರಿಯನ್ನೂ ಕಾಗಲ್ ಗ್ರಾಮವನ್ನೂ ಕೊಡಲಿಕ್ಕೊಡಂಬಟ್ಟು, ಅವನನ್ನು ತನ್ನ ಕಡೆಗೆ ಮಾಡಿಕೊಂಡಿದ್ದನು.

ಇಷ್ಟರಿಂದಲೇ ನಾನಾನ ಪ್ರಯತ್ನವು ಮುಗಿಯಲಿಲ್ಲ. ಅವನು ತುಕೋಜಿರಾವ ಹೋಳಕರನಿಂದ ಸಹಾಯ-ಮಾಡುತ್ತೇನೆಂದು ವಚನತೆಗೆದುಕೊಂಡನು; ಮತ್ತು ಖರ್ಡೆಯ ದಂಡಯಾತ್ರೆಯಲ್ಲಿ ಪೇಶ್ವೇನು ಹಿಡಿದುಕೊಂಡ ಎಲ್ಲ ಪ್ರಾಂತವನ್ನೂ ಹಿಂದಿನ ಕಪ್ಪವನ್ನೂ ಬಿಟ್ಟುಕೊಡುವ ಶರ್ತಿನಿಂದ ನಿಜಾಮುನ ಸಹಾಯುವನ್ನು ದೊರಕಿಸಿದನು. ಇದಲ್ಲದೆ ಅವನು ೧೫ಲಕ್ಷ ರೂಪಾಯಿ ರೋಖು ಕೊಟ್ಟು ಭೋಸಲೆಯುನ ದಂಡನ್ನು ತರಿಸಿದನು, ಮತ್ತು ಕೊಲ್ಲಾಪುರದವರನ್ನು ಪಟವರ್ಧನನ ಮೇಲೆ ಎಬ್ಬಿಸಿ ಕೂಡ್ರಿಸಿದನು.

ಈಯೆಲ್ಲ ಘಟಾಟೋಪವು ಶಕೆ ೧೭೧೯ರ ಮಳೆಗಾಲದಲ್ಲಿ ಆಯಿತು ಮುಂದೆ ಆಶ್ವಿನ ಮಾಸದ ಆರಂಭದಲ್ಲಿ ನಾನಾನು ರಚಿಸಿದ ಈ ಭಯಂಕರವಾದ ವ್ಯೂಹವನ್ನರಿಯದ ಬಾಳೋಬನು ಅವನನ್ನು ಹಿಡಿಯಲಿಕ್ಕೆ ಸಾಲ್ವೆಯ ಘಟ್ಟಕ್ಕೆ ದಂಡನ್ನು ಕಳುಹಿದನು. ಈಸಂಧಿಯಲ್ಲಿ ದೌಲತ್ತರಾವ ಶಿಂದೇನು ಬಾಳೋಬನನ್ನು ಹಿಡಿದು ಕಾವಲಿನಲ್ಲಿರಿಸಿದನು, ಮತ್ತು ನಾನಾನ ಅನುಯಾಯಿಯಾದ ನಾರೋಪಂತ ಚಕ್ರದೇವನು ಶಿವನೇರಿಗೆ ಓಡಿಹೋದ ಪರಶುರಾಮಭಾವು-ಚಿಮಾಜಿಅಪ್ಪರನ್ನು ಸೆರೆಹಿಡಿದು, ಅವರ ಪಕ್ಷದವರಾದ ೪೫ಮಂದಿ ಬ್ರಾಹ್ಮಣರನ್ನು ಸೆರೆಯಲ್ಲಿಟ್ಟನು.

ಈಸುದ್ದಿಯನ್ನು ಕೇಳಿ, ನಾನಾನು ಮಹಡದಿಂದಲೂ ಬಾಜಿರಾಯನು ತನ್ನ ಪಾಳಯದಿಂದಲೂ ಪುಣೆಗೆ ಹೊರಟರು. ಮುಂದೆ ನಾನಾನು ಕಾರ್ತಿಕವದ್ಯ ೧೧ ದಿವಸ ರಾಜ್ಯಕಾರ್ಯವನ್ನು ಮಾಡಲಾರಂಭಿಸಿದನು. ಬಾಜಿರಾಯನಿಗೆ ಮಾರ್ಗಶೀರ್ಷ ಶುದ್ಧ ೫ದಿವಸ ಪೇಶ್ವೇನ ವಸ್ತ್ರಗಳು ದೊರೆದವು. ಬಳಿಕ ಚಿಮಾಜಿ-ಅಪ್ಪನ ದತ್ತಕವು ಅಶಾಸ್ತ್ರವೆಂದು ನಿರ್ಣಯವಾದ್ದರಿಂದ ಆದತ್ತವಿಧಾನವನ್ನು ಮಾಡಿಸಿದ ಎಲ್ಲ ಬ್ರಾಹ್ಮಣರು ಗಡೆದಾಟಿಸಲ್ಪಟ್ಟರು. ಆದರೆ ಮುಂದೆ ೩|೪ ತಿಂಗಳಲ್ಲೇ ಬಾಜಿರಾಯನ ಕಯ್ಕೆಳಗೆ ಕೆಲಸ ಮಾಡುವುದರಿಂದ ತನಗೆ ಕೀರ್ತಿ ಬರಲಿಕ್ಕಿಲ್ಲೆಂದು ಮನಗಂಡು, ನಾನಾನು ಕಾಶಿಗೆ ಹೋಗಲಿಕ್ಕೆ ಅವನ ಅಪ್ಪಣೆಯನ್ನು ಕೇಳಿದನು.

ಆದರೆ ಅವಿಶ್ವಾಸಘಾತಕಿಯಾದ ಬಾಜೀರಾಯನು ಆಗ್ರಹಮಾಡಿ ಅವನನ್ನು ಇಟ್ಟುಕೊಂಡು ಒಳಗಿಂದೊಳಗೇ ನಾನಾಶಿಂದೆಯರ ನಡುವೆ ದ್ವೇಷಹುಟ್ಟಿಸಲಿಕ್ಕೆ ಪ್ರಯತ್ನನಡಿಸಿದನು.

ಬಾಜೀರಾಯನು ಪೇಶ್ವೆಯಾಗುವದಕ್ಕಿಂತ ಮೊದಲು ರಘೋಜಿ ಭೋಸಲೇನಿಗೆ ೧೦ ಲಕ್ಷ ರೂಪಾಯಿಗಳನ್ನೂ ಮಂದಬೆಪ್ರಾಂತ ವನ್ನೂ ಕೊಡಲೊಪ್ಪಿದ್ದನು; ಆದರೆ ಅವನ ಬಳಿಯಲ್ಲಿ ಹಣವಿಲ್ಲ ದ್ದರಿಂದ ನಾನಾನು ೧೦ ಲಕ್ಷ ರೂಪಾಯಿಗಳನ್ನು ತನ್ನ ಕಯ್ಯಿಂದಲೆ ಕೊಟ್ಟು, ಮಂದಬೆಪ್ರಾಂತದ ಬಗ್ಗೆ ಪೇಶ್ವೇನಿಂದ ಕಾಗದ ಬರಿಸಿ ಕೊಟ್ಟನು. ಆದರೆ ಪೇಶ್ವೇನು ನಿಜಾಮನಿಗೆ ಕೊಡತಕ್ಕ ಪ್ರಾಂತ ವನ್ನು ಮಾತ್ರ ಕೊಡಲಿಲ್ಲ.

ಹಿಂದೆ ಹೇಳಿದಂತೆ ಬಾಜೀರಾಯನು ಶಿಂದೇನ ಮಾವನಾದ ಸರ್ಜೀರಾವ ಘಾಟಗೇನಿಗೆ ೨ ಕೋಟಿ ರೂಪಾಯಿಗಳನ್ನೂ ಶಿಂದೇ ನ ದಿವಾಣಗಿರಿಯನ್ನೂ ಕಾಗಲ್‌ಗ್ರಾಮವನ್ನೂ ಕೊಡಲೊಡಂ ಬಟ್ಟಿದ್ದನು. ಈಗೀದುಷ್ಟನಾದ ಬಾಜೀರಾಯನು ನಾನಾನ ಕಯ್ಯಲ್ಲಿ ಅಧಿಕಾರವಿರುವ ವರೆಗೆ ಅವನು ದಿವಾಣಗಿರಿಯನ್ನು ಕೊಡಗೊಡು ವದಿಲ್ಲೆಂತಲೂ ನಾನಾನನ್ನು ಸೆರೆಹಿಡಿಯಬೇಕೆಂತಲೂ ಘಾಟಗೇ ನಿಗೆ ಸೂಚಿಸಿದನು. ಆಗಲವನು ತನ್ನ ಕಯ್ಯಲ್ಲಿ ಸೂತ್ರಗೊಂಬೆ ಯಂತೆ ಕುಣಿಯುತ್ತಿದ್ದ ತನ್ನ ಅಳಿಯನಾದ ದೌಲತ್ತರಾವ ಶಿಂದೇ ನಿಗೆ ನಾನಾನನ್ನು ಹಿಡಿಯಲಿಕ್ಕೆ ಹಂಚಿಕೆ ಹೇಳಿಕೊಟ್ಟನು; ಅದರಂತೆ ದೌಲತ್ತರಾಯನು ನಾನಾನೊಡನೆ ಸ್ನೇಹಬೆಳಿಸಿ, ೨ । ೩ ತಿಂಗಳುಗಳ ವರೆಗೆ ಅವನ ಪೂರ್ಣವಿಶ್ವಾಸಿಕನಂತೆ ನಡೆದುಕೊಂ ಡು, ಮುಂದೆ ಪೌಷ ಶುದ್ಧ ೧೩ ದಿವಸ ಸಾಯಂಕಾಲಕ್ಕೆ ಅವನನ್ನು ತನ್ನ ಪಾಳಯಕ್ಕೆ ಊಟಕ್ಕೆ ಕರೆದನು. ಇದಕ್ಕೂ ೨ । ೩ ದಿವಸ ಮೊದಲೇ ಶಿಂದೇನ ಘಾತಕವಿಚಾರವು ನಾನಾನಿಗೆ ಕರ್ಣಪರಂ ಪರೆಯಿಂದ ತಿಳಿದಿತ್ತು, ಮತ್ತು ಅವನಿಗೆ ವಿಶ್ವಾಸವಿದ್ದ ಶಂಕರಜೋ ಯ್ಸಿಯೆಂಬವನಾದರೂ ಅವನಿಗೆ ಕಾರಾಗೃಹವಾಸವಾಗುವದೆಂದು ಭವಿಷ್ಯ-ಹೇಳಿದ್ದನು. ಆದರೂ ನಾನಾನು ಶಿಂದೇನ ಊಳಿಗದ

ಲ್ಲಿದ್ದ ಕರ್ನಲ್ ಮಿಚೆಲ್ ಫೆಲೋಸನೆಂಬ ಇಂಗ್ಲಿಷ ಗೃಹಸ್ಥನು ಕೊಟ್ಟ ಅಭಯವಚನವನ್ನು ನಂಬಿ, ಶಿಂದೇನ ಪಾಳಯಕ್ಕೆ ಹೊರಟನು. ಅವನು ಶಿಂದೇನಿದ್ದ ಪಾನವಡಿಗೆ ಹೋದಕೂಡಲೆ, ಶಿಂದೇನ ಜನರು ನಾನಾನ ಜನರನ್ನು ಕೆಣಕಲು, ಆಗದ್ದಲದಲ್ಲಿ ಕರ್ನಲ್‌ಫೆಲೋಸನು ನಾನಾನನ್ನು ಸೆರೆಹಿಡಿದನು.* ಅದೇ ಸಮಯಕ್ಕೆ ಪೇಶ್ವೇನು ನಾನಾನ ಅನುಯಾಯಿಗಳಾದ ಬಾಬಾರಾವ ಫಡಕೆ, ನಾರೋಪಂತ ಚಕ್ರದೇವ, ಗೋವಿಂದರಾವ ಪಿಂಗಳೆ ಮುಂತಾದ ಪ್ರಮುಖಗೃಹಸ್ಥರನ್ನು ಕರಿಸಿ ಅವರನ್ನು ಸೆರೆಯಲ್ಲಿಟ್ಟನು.

ಈಮೇರೆಗೆ ಹಳೆ ಉದ್ಯೋಗಸ್ಥರನ್ನೆಲ್ಲ ಸೆರೆಯಲ್ಲಿಟ್ಟು, ಪೇಶ್ವೇನು ತನ್ನ ದತ್ತಕ ತಮ್ಮನಾದ ಅಮೃತರಾವ. ಗೋವಿಂದರಾವ ಕಾಳೆ, ಶಿವರಾಮ ನಾರಾಯಣ ಥತ್ತೆ ಮುಂತಾದವರನ್ನು ದೊಡ್ಡದೊಡ್ಡ ಉದ್ಯೋಗಸ್ಥರನ್ನು ಮಾಡಿ, ಬಾಳಾಜಿಪಂತ ಪಟವರ್ಧನನೆಂಬವನನ್ನು ದಳವಾಯಿಯಾಗಿ ನಿಯಮಿಸಿ, ಫಡನವೀಸಿಯ ಕೆಲಸವನ್ನು ತಾನೇ ಸ್ವತಃ ನೋಡಲಾರಂಭಿಸಿದನು. ಬೇಕಾದವರು ರಾಜ್ಯಕಾರ್ಯವನ್ನು ಸರಸಾಗಿ ನಡಿಸಬಹುದೆಂದು ಈತಿಳಿಗೇಡಿಯ ತಿಳವಳಿಕೆ ಇದ್ದಂತೆ ತೋರುತ್ತದೆ. ಈಯವಿಚಾರದ ಪರಿಣಾಮವು ತುಸುದಿವಸದಲ್ಲೇ ಅವನ ಅನುಭವಕ್ಕೆ ಬಂತು. ಅದು ಹೇಗೆಂದರೆ, ದ್ರವ್ಯಲೋಭಿಯಾದ ಘಾಟಗೆಯು ಪುಣೆಯಲ್ಲಿದ್ದ ಪ್ರಮುಖಗೃಹಸ್ಥರನ್ನು ಹಿಡಿಸಿ, ಹೊಡಿಸಿ, ಬಡಿಸಿ, ಅವರಿಂದ ಹಣವನ್ನು ಹರಕೊಳ್ಳಲಾರಂಭಿಸಿದನು. ಆದ್ದರಿಂದ ಪೇಶ್ವೇನಿಗೆ ಪಶ್ಚಾತ್ತಾಪ ಹುಟ್ಟಿ ಘಾಟಗೆಯ ಉದ್ದುರುಟುತನವನ್ನು ನಿಲ್ಲಿಸಲಿಕ್ಕೆ ಬೇರೆ ಕುಯುಕ್ತಿಗಳನ್ನು ಮಾಡಲಾರಂಭಿಸಿದನು.

ನಾನಾನು ಶಿಂದೇನ ಪಾಳಯದಲ್ಲಿ ಸೆರೆಯಾಳಾಗಿದ್ದನೆಂದು ಹಿಂದೆ ಬರೆದಿರುತ್ತೇವಷ್ಟೇ. ಅವನು ಅಲ್ಲಿಯಾದರೂ ಸುಮ್ಮನೆ ಕೂಡ್ರಲಿಲ್ಲ. ಅವನು ದರಬಾರದಲ್ಲಿ ತನ್ನ ನಂಬಿಗಸ್ಥರಾಗಿದ್ದ ಚಕ್ರದೇವ

* ಈಮೊದಲೇ ಅಂದರೆ ಭಾದ್ರಪದ ಶುದ್ಧ ೬ ದಿವಸ ತುಕೋಜಿ ಹೋಳಕರನು ಸತ್ತನು. ನಾನಾನಿಗೆ ಅವನ ಆಶ್ರಯವು ಬಹಳವಾಗಿತ್ತು.

ಪಿಂಗಳೆಯರನ್ನು ಪೇಶ್ವೆ-ಶಿಂದೆಯರ ನಡುವೆ ಜಗಳಹುಟ್ಟಿಸಲಿಕ್ಕೆ ಹಚ್ಚಿದನು, ಮತ್ತು ತಾನು ಮಹಾದಾಜಿ ಶಿಂದೇನ ೩ ಮಂದಿ ಹೆಂಡಂದಿರನ್ನು ದೌಲತ್ತರಾವ ಶಿಂದೇನ ವಿರುದ್ಧವಾಗಿ ಎಬ್ಬಿಸಿ ಕೂಡ್ರಿಸಿದನು. ದೌಲತ್ತರಾಯನು ತಾನು ಪಟ್ಟವೇರುವಾಗ ಈಮೂವರಿಗೂ ಉಂಬಳಿ-ಹಳ್ಳಿಗಳನ್ನು ಕೊಡುತ್ತೇನೆಂದು ಮಾತುಕೊಟ್ಟಿದ್ದನು; ಆದರೆ ಅವನು ಇನ್ನೂವರೆಗೆ ಹಾಗೆ ಮಾಡಿದ್ದಿಲ್ಲ. ಆದ್ದರಿಂದ ಅವರು ಈಗ ಹಟಹಿಡಿದು ತಮಗೆ ಉಂಬಳಿಹಳ್ಳಿಗಳನ್ನು ಕೊಟ್ಟ ಹೊರತು ಅನ್ನನೀರು ತೆಗೆದುಕೊಳ್ಳುವದಿಲ್ಲೆಂದು ಕುಳಿತರು. ಆಗ ದುಷ್ಟನಾದ ಘಾಟಗೆಯು ಅವರನ್ನು ಬೆತ್ತದಿಂದ ಹೊಡೆಯಲಾರಂಭಿಸಲು, ಶಿಂದೇನ ಎಷ್ಟೋ ಮಂದಿ ಸರದಾರರು ಆಹೆಂಗಸರಿಗೆ ಅನುಕೂಲವಾಗಿ ಅವನನ್ನೇ ಹಿಡಿಯಲಿಕ್ಕೆತ್ತುಗಡೆಮಾಡಲು, ಅವನು ಪಾಳಯದಿಂದೋಡಿಹೋದನು. ಬಳಿಕ ಆಮೂವರು ಹೆಂಗಸರು ಪೇಶ್ವೇನ ತಮ್ಮನಾದ ಅಮೃತರಾಯನ ಬೆನ್ನುಬಿದ್ದರು. ಬಳಿಕ ಘಾಟಗೆಯು ತಿರುಗಿ ಶಿಂದೇನ ಪಾಳಯಕ್ಕೆ ಬಂದು ಮೊಹರಮ್ಮದ ದಿವಸ ವಿಶ್ವಾಸಘಾತಕತನದಿಂದ ಅಮೃತರಾಯನ ಪಾಳಯದ ಮೇಲೆ ಬಿದ್ದು ಎಷ್ಟೋ ಪ್ರಾಣಹಿಂಸೆಯನ್ನು ಮಾಡಿದನು!! ಆಗದ್ದಲದಲ್ಲಿ ಮಹಾದಾಜಿ ಶಿಂದೇನ ಹೆಂಡಂದಿರು ತಪ್ಪಿಸಿಕೊಂಡು ಕೊಲ್ಹಾಪುರಕ್ಕೆ ಓಡಿಹೋದರು.

ತನ್ನ ತಮ್ಮನನ್ನೇ ಕೆಣಕಿದ್ದನ್ನು ನೋಡಿ ಪೇಶ್ವೇನು ಎಚ್ಚತ್ತನು. ಆಗ ಮಾತ್ರ ಶಿಂದೇನು ತನ್ನ ಕಯ್ಕೆಳಗಿನವನೆಂಬ ಅವನ ಭ್ರಮೆಯು ದೂರಾಯಿತು. ಆದ್ದರಿಂದ ಅವನು ಹೆದರಿ ಶಿಂದೇನ ಪಾರಪತ್ಯ ಮಾಡುವ ಉದ್ದೇಶದಿಂದ ತನ್ನ ದಳವಾಯಿಯಾದ ಚಕ್ರದೇವನಿಗೆ ಯುದ್ಧಸನ್ನಾಹ ಮಾಡಲಿಕ್ಕೆ ಅಪ್ಪಣೆಕೊಟ್ಟನು, ಹೋಳಕರನಿಗೆ ದಂಡಿನೊಡನೆ ಹೊರಟು ಪುಣೆಗೆ ಬರಲಿಕ್ಕೆ ಪತ್ರ ಕಳಿಸಿದನು, ಮತ್ತು ಬೇದರ ಪ್ರಾಂತದ ಚೌಥವನ್ನೂ ೮ ಲಕ್ಷದ ಪ್ರಾಂತವನ್ನೂ ಕೊಡಲಿಕ್ಕೊಡಂಬಟ್ಟು ನಿಜಾಮನ ಸಹಾಯವನ್ನು ದೊರಕಿಸಿದನು.

ಈಸಿದ್ಧತೆಯನ್ನು ನೋಡಿ ದೌಲತ್ತರಾಯನು ಹೆದರಿದನು. ಕೊಲ್ಲಾಪುರಕ್ಕೆ ಹೋದ ಮಹಾದಾಜಿಯ ಹೆಂಡಂದಿರು ದಂಡು ತೆಗೆದುಕೊಂಡು ಪುಣೆಯ ಸನೆಯಕ್ಕೆ ಈಸಮಯದಲ್ಲಿ ಬಂದರು. ಆದ್ದರಿಂದ ಅವನು ನಿರುಪಾಯನಾಗಿ ನಾನಾನ ಸಹಾಯದಿಂದ ಈಗಂಡಾಂತರದೊಳಗಿಂದ ಪಾರಾಗ ಬೇಕೆಂದೆಣಿಸಿ, ಅವನನ್ನು ಅಹಮ್ಮದನಗರದಿಂದ ಕರಿಸಿ, ಅವನಿಂದ ೧೦ ಲಕ್ಷ ರೂಪಾಯಿ ತೆಗೆದುಕೊಂಡು, ಅವನನ್ನು ಬಂಧನದಿಂದ ಮುಕ್ತಮಾಡಿದನು. ನಾನಾನು ಕೂಡಲೆ ನಿಜಾಮನಿಗೆ ಪತ್ರಬರೆದು ಅವನು ಪೇಶ್ವೇನಿಗೆ ನೆರವಾಗದಂತೆ ವ್ಯವಸ್ಥೆಮಾಡಿದನು.

ನಾನಾನು ಬಿಡುಗಡೆಯಾದ್ದನ್ನು ಕೇಳಿ ಬಾಜಿರಾಯನು ಶಿಂದೇನ ಪಾರಪತ್ಯ ಮಾಡುವ ವಿಚಾರವನ್ನು ಬಿಟ್ಟು, ನಾನಾ-ಶಿಂದೇರೊಡನೆ ಸ್ನೇಹದ ಮಾತುಗಳನ್ನು ನಡಿಸಿದನು; ಮತ್ತು ಜಪ್ತಿ ಮಾಡಿದ ನಾನಾನ ಜಹಗೀರು-ವಾಡೆಗಳನ್ನು ಬಿಟ್ಟುಕೊಟ್ಟನು. ಬಳಿಕ ಸುಮುಹೂರ್ತವನ್ನು ನೋಡಿ, ನಾನಾನು ತನ್ನ ವಾಡೆಗೆ ಬಂದು ಅಲ್ಲಿ ಇರಲಾರಂಭಿಸಿದನು (ಮಾಗಶೀರ್ಷಶುದ್ಧ ೧೫). ಈಕಾಲಕ್ಕೆ ೨ ನಾಲಿಗೆಯುವನಾದ ಬಾಜಿರಾಯನು ನಾನಾನಿಗೆ ರಾಜ್ಯಕಾರ್ಯವನ್ನು ಕಯ್ಕೊಳ್ಳಬೇಕೆಂದು ಆಗ್ರಹ-ಮಾಡುತ್ತಿದ್ದನು, ಮತ್ತು ಒಳಗಿಂದೊಳಗೇ ಅವನ ಅಧಿಕಾರವನ್ನು ಬೆಳೆಯುಗೊಡಬಾರದೆಂಬ ಉದ್ದೇಶದಿಂದ ಶಿಂದೇನಿಗೆ ಪುಣೆಯಲ್ಲೇ ಇರಬೇಕೆಂದು ಬೇಡಿಕೊಳ್ಳುತ್ತಿದ್ದನು!! ಮುಂದೆ ಅವನ ಮಾತು ಕೇಳದೆ ಶಿಂದೇನು ತನ್ನ ರಾಜ್ಯಕ್ಕೆ ತಿರುಗಿ ಹೋಗುವ ನಿಶ್ಚಯವನ್ನು ಮಾಡಿದ ಕೂಡಲೆ, ಅವನು ಒಂದು ದಿನ ರಾತ್ರಿ ವೇಷಬದಲಿಸಿಕೊಂಡು ನಾನಾನ ಮನೆಗೆ ಬಂದು ಅವನ ಕಾಲ್ಗೆರಗಿ, ರಾಜ್ಯಭಾರವನ್ನು ಕಯ್ಕೊಳ್ಳಬೇಕೆಂದು ಅವನನ್ನು ಅಂಗಲಾಚಿ ಬೇಡಿಕೊಂಡನು. ಆಗ ನಾನಾನು ಕನಿಕರದಿಂದಲೊ ಪೇಶ್ವಾಯಿಯ ಅಭಿಮಾನದಿಂದಲೊ ರಾಜಕಾರ್ಯವನ್ನು ನಡಿಸಲಾರಂಭಿಸಿದನು. ಆದರೂ ಅವನ ಮನಸ್ಸಿನಲ್ಲಿ ಪೇಶ್ವೇನು ವಿಶ್ವಾಸಘಾತಕತನವನ್ನು ಮಾಡಬಹುದೆಂಬ ಸಂಶಯವು ಪೂರ್ಣವಾಗಿತ್ತು.

ಈಕಾಲಕ್ಕೆ ಮಾರ್ಕ್ವೀಸ ವೆಲಸ್ಲೆಯು ಈದೇಶದ ಸರ್ವಾಧಿಪತಿಯಾಗಿದ್ದನು. ಅವನು ಯುಕ್ತಿಯಿಂದ ನಿಜಾಮನನ್ನು ಸಹಾಯಸೇನಾಪದ್ಧತಿ (ಸಬ್ಸಿಡಿಯರಿಸಿಸ್ಟಿಮ್)ಗೆ ಒಡಂಬಡಿಸಿ, ಪೇಶ್ವೇನನ್ನು ಒಡಂಬಡಿಸಲಿಕ್ಕೆ ಯತ್ನನಡಿಸಿದನು. ಅದಕ್ಕೆ ನಾನಾನು ಒಡಂಬಡದೆ ಪೇಶ್ವೇನಿಂದ ಅದರಂತೆ ಒಂದು ಕಾಗದ ಬರಿಸಿದನು. ಮುಂದೆ ಇಂಗ್ಲಿಷರು ಟೀಪುವಿನೊಡನೆ ಕಡೆಯ ಯುದ್ಧವನ್ನು ಹೂಡಿದಾಗ ಅವರು ಮೊದಲಿನ ಒಪ್ಪಂದದಂತೆ ದಂಡಿನ ಸಹಾಯ ಮಾಡಲಿಕ್ಕೆ ಪೇಶ್ವೇನನ್ನು ಕೇಳಿದರು. ಆಗ ಪಟವರ್ಧನ, ರಾಸ್ತೆ, ವಿಂಚೂರಕರ, ಗೋಖಲೆ ಮುಂತಾದ ಸರದಾರರ ದಂಡನ್ನು ಒಟ್ಟು ಗೂಡಿಸಿ, ಪರಶುರಾಮಭಾವು ಪಟವರ್ಧನನನ್ನು ಅದರ ಮೇಲೆ ಮುಖ್ಯದಳವಾಯಿಯನ್ನು ನಿಯಮಿಸಿ ಇಂಗ್ಲಿಷರ ನೆರವಿಗೆ ಕಳುಹಬೇಕೆಂಬ ನಾನಾನ ಆಲೋಚನೆಗೆ ಬಾಜಿರಾಯನು ಒಪ್ಪಿಕೊಂಡಂತೆ ಹೊರಗೆ ತೋರಿಸಿ, ಒಳಂಗಿದೊಳಗೇ ಟೀಪುಸುಲ್ತಾನನಿಗೆ ಸಹಾಯಮಾಡಬೇಕೆಂದು ಶಿಂದೇನೊಡನೆ ಆಲೋಚಿಸಿದನು!!

ಆದರೆ ತುಸುದಿವಸದಲ್ಲೇ ಇಂಗ್ಲಿಷರು ನಿಜಾಮನ ಸಹಾಯದಿಂದ ಟೀಪುವಿನ ರಾಜ್ಯವನ್ನು ಹಿಡಿದುಕೊಂಡರು ಮತ್ತು ಟೀಪುವು ರಣಭೂಮಿಯಲ್ಲಿ ಸತ್ತನು (ಶಕೆ ೧೭೨೧ ಚೈತ್ರವದ್ಯ ೩೦). ಆಗ ಸರ್ವಾಧಿಪತಿಯು ಕೆಲವು ಶರ್ತುಗಳಿಗೆ ಪೇಶ್ವೇನು ಒಡಂಬಟ್ಟರೆ ಮಾತ್ರ ಅವನಿಗೆ ೧೦ ಲಕ್ಷದ ರಾಜ್ಯವನ್ನು ಕೊಡುವೆನೆಂದು ಪತ್ರ ಬರೆದನು. ಆಶರ್ತುಗಳಾವವೆಂದರೆ:—

೧. ಪೇಶ್ವೇನು ಇಂಗ್ಲಿಷರ ಸಹಾಯಕ್ಕೆ ದಂಡು ಕಳುಹದೆ ಟೀಪುವಿನ ವಕೀಲನನ್ನು ತನ್ನ ರಾಜಧಾನಿಯಲ್ಲಿ ಇಟ್ಟುಕೊಂಡುದರಿಂದ ಅವನಿಗೆ ಮೈಸೂರ ರಾಜ್ಯದ ಭಾಗವನ್ನು ಕೇಳಲಿಕ್ಕೆ ಹಕ್ಕು ಇಲ್ಲ.

೨. ಪೇಶ್ವೇನು ಮೈಸೂರರಾಜ್ಯದ ಮೇಲಿದ್ದ ತನ್ನ ಚೌಥದ ಹಕ್ಕನ್ನು ಬಿಟ್ಟುಕೊಡಬೇಕು, ನಿಜಾಮಳಿಲ್ಲಿಯಂತೆ ಇಂಗ್ಲಿಷರ ೬೦೦೦ ದಂಡನ್ನು ತನ್ನ ರಾಜ್ಯದಲ್ಲಿಟ್ಟುಕೊಳ್ಳಬೇಕು, ಮತ್ತು ನಿಜಾ

ಮನೊಡನೆ ಬಂದ ತನ್ನ ಜಗಳಗಳನ್ನು ಇಂಗ್ಲಿಷರ ವಿದ್ಯಮಾನ ತೀರಿಸಿಕೊಳ್ಳಬೇಕು.

೩. ಪೇಶ್ವೇನು ಸುರತಪಟ್ಟಣದ ಉತ್ಪನ್ನದಲ್ಲಿದ್ದ ತನ್ನ ಪಾಲನ್ನು ಬಿಟ್ಟುಕೊಟ್ಟು, ಅದರ ಬದಲು ಬೇರೆ ಪ್ರಾಂತವನ್ನು ತೆಗೆದುಕೊಳ್ಳಬೇಕು.

೪. ಪರಚಕ್ರ ಬಂದರೆ ನಿಜಾಮ ಪೇಶ್ವೆ ಭೋಸಲೆ ಇವರು ಇಂಗ್ಲಿಷರಿಗೆ ನೆರವಾಗಬೇಕು.

೫. ಪೇಶ್ವೇನು ಫ್ರೆಂಚರಿಗೆ ತನ್ನ ರಾಜ್ಯದಲ್ಲಿ ಆಶ್ರಯ ಕೊಡಕೂಡದು.

ಈಪತ್ರಕ್ಕೆ ನಾನಾನು ಉತ್ತರ ಬರೆದುದೇನಂದರೆ:—

೧. ಒಳಜಗಳದ ಮೂಲಕವಾಗಿ ಪೇಶ್ವೇಸಿಗೆ ದಂಡುಕಳುಹಲಿಕ್ಕೆ ಅನುಕೂಲವಾಗಲಿಲ್ಲ; ಮತ್ತು ಯುದ್ಧಕಾಲದಲ್ಲಿಯಾದರೂ ವಕೀಲನನ್ನು ಇಟ್ಟುಕೊಳ್ಳುವುದು ಈದೇಶದ ಸಾಂಪ್ರದಾಯವಿದೆ.

೨. ಮೈಸೂರದ ಚೌಥದ ಬದಲು ೧೦ ಲಕ್ಷದ ಪ್ರಾಂತವನ್ನು ತೆಗೆದುಕೊಳ್ಳಲಿಕ್ಕೆ ಅಡ್ಡಿಯಿಲ್ಲ; ಆದರೆ ಸುರತದ ಪಾಲನ್ನು ಬಿಡಲಿಕ್ಕಾಗುವದಿಲ್ಲ.

೩. ಇಂಗ್ಲಿಷರ ೨ ಪಟಾಲಮುಗಳನ್ನು ಪೇಶ್ವೇನ ರಾಜ್ಯದಲ್ಲಿ ಇಟ್ಟುಕೊಳ್ಳುವೆವು. ಆದರೆ ಆಪಟಾಲಮುಗಳನ್ನು ಜಂಜೀರಾ ಸಂಸ್ಥಾನವನ್ನು ಹಿಡಿದುಕೊಳ್ಳಲಿಕ್ಕೂ ಮಾಂಡಲಿಕರಾಜರನ್ನು ದಂಡಿಸಲಿಕ್ಕೂ ಉಪಯೋಗಿಸುವೆವು.

೪. ಫ್ರೆಂಚರು ಈದೇಶಕ್ಕೆ ದಂಡೆತ್ತಿಬಂದರೆ ಪೇಶ್ವೇನು ಇಂಗ್ಲಿಷರಿಗೆ ನೆರವಾಗುವನು; ಆದರೆ ಫ್ರೆಂಚರಿಗೆ ತನ್ನ ದಂಡಿನಲ್ಲಿ ಉದ್ಯೋಗಕೊಡುವ ತನ್ನ ಸ್ವಾತಂತ್ರ್ಯವನ್ನು ಅವನು ಬಿಡಲಾರನು.

೫. ಭೋಸಲೆಯು ಪೇಶ್ವೇನ ಮಾಂಡಲಿಕನಾದ್ದರಿಂದ ಅವನ ಹೆಸರು ಈಯೊಪ್ಪಂದದಲ್ಲಿ ಬರಕೂಡದು; ಮತ್ತು ನಿಜಾಮನ ಸಂಬಂಧದ ಜಗಳಗಳಲ್ಲಿ ಇಂಗ್ಲಿಷರ ಮಧ್ಯಸ್ಥಿಕೆಗೆ ಪೇಶ್ವೇನು ಒಡಂಬಡಲಾರನು.

ಇದು ನಾನಾನ ರಾಜಕೀಯ ಸಂಬಂಧಕಡೆಯ ಮಹತ್ವದ ಪತ್ರವಾದ್ದರಿಂದ ಇದನ್ನು ವಿಸ್ತಾರವಾಗಿ ಬರೆದಿದ್ದೇವೆ. ಇದರಲ್ಲಿ ಅವನು ಪೇಶ್ವಾಯಿಗೆ ಪ್ರತಿಕೂಲವಾದ ಎಷ್ಟೋ ಮಾತುಗಳನ್ನು ನಿರಾಕರಿಸಿ, ವಾರ್ನಿಂಗಟನ್ ದೊರೆಯ ಸಹಾಯ-ಸೇನಾಪದ್ಧತಿಗೆ ಒಡಂಬಡಲಿಲ್ಲ; ಭೋಸಲೇನನ್ನು ಸ್ವತಂತ್ರಮಾಡುವ ಪ್ರಯತ್ನಕ್ಕೆ ಇಂಬುಗೊಡಲಿಲ್ಲ; ಮತ್ತು ಸುರತದಲ್ಲಿಯೂ ನಿಜಾಮನ ರಾಜ್ಯದಲ್ಲಿಯೂ ಇದ್ದ ತನ್ನ ಹಕ್ಕುಗಳನ್ನು ಬಿಟ್ಟುಕೊಡಲಿಲ್ಲ. ಆದರೆ ಮುಂದೆ ೨೦ ವರ್ಷಗಳೊಳಗೆ ಈಹಕ್ಕುಗಳೇಕೆ ಶಿವಾಜಿಯಿಂದ ದೊರಕಿಸಲ್ಪಟ್ಟ ಎಲ್ಲ ರಾಜ್ಯವು ಇಂಗ್ಲಿಷರ ಕಯ್ಸೇರಬಹುದೆಂಬ ವಿಚಾರವು ಆಕಾಲಕ್ಕೆ ನಾನಾನ ಕನಸುಮನಸುಗಳಲ್ಲಿಯಾದರೂ ಬಂದಿರಲಿಕ್ಕಿಲ್ಲವಲ್ಲ!!

ಈಕಾಲಕ್ಕೆ ಸಾತಾರೆಯ ಮಹಾರಾಜನ ತಮ್ಮನಾದ ಚತುರಶೃಂಗನು ಕಾವಲಿನಿಂದ ತಪ್ಪಿಸಿಕೊಂಡು ಓಡಿಹೋಗಿ, ದಂಡುಕೂಡಿಸಿ, ರಾಸ್ತೆ-ಪ್ರತಿನಿಧಿಗಳ ದಂಡುಗಳನ್ನು ಎಷ್ಟೋ ಕಡೆಯಲ್ಲಿ ಸೋಲಿಸಿದನು. ಮಹಾದಾಜಿಶಿಂದೇನ ಹೆಂಡಂದಿರ ಪಕ್ಷಹಿಡಿದ ಕೊಲ್ಲಾಪುರದ ಅರಸನು ಧೊಂಡೋಪಂತಗೋಖಲೇನನ್ನು ಬಾರಿಬಾರಿಗೆ ಸೋಲಿಸಿ ಕರ್ನಾಟಕವನ್ನು ಸುಲಿದು ಹಾಳುಮಾಡಿ, ತಾಸಗಾವಿಯನ್ನು ಹಿಡಿದುಕೊಂಡು, ಅಲ್ಲಿದ್ದ ಪಟವರ್ಧನನ ಅರಮನೆಯನ್ನು ಸುಟ್ಟುಬಿಟ್ಟನು. ಈಹಾವಳಿಯನ್ನು ಕೇಳಿ ನಾನಾನು ದಸರೆಯಾದ ಕೂಡಲೆ ಪುಣೆಯಿಂದ ದಂಡುಕಳುಹುವೆನೆಂದು ಪಟವರ್ಧನನಿಗೆ ಬರೆದು ತಿಳಿಸಿದನು. ಆದರೆ ಪರಶುರಾಮಭಾವು ಪಟವರ್ಧನನು ಸಿಟ್ಟಿನಿಂದಲೊ ಉಲುಕೋಚಿತನದಿಂದಲೊ ಹೆಮ್ಮೆಯಿಂದಲೊ ಪುಣೆಯಿಂದ ಬರುವ ದಂಡಿನ ಹಾದಿ ನೋಡದೆ ಕೊಲ್ಲಾಪುರದ ಅರಸನಿಗೆ ಇದುರಾಗಿ ಪಟಣಕುಡಿಯೆಂಬಲ್ಲಿ ಸೋತು ಸತ್ತನು (ಭಾದ್ರಪದ ಶಕೆ ೧೭೨೧).

ಈಯನರ್ಥದ ಸುದ್ದಿಯನ್ನು ಕೇಳಿ ನಾನಾನು ನೊಂದುಕೊಂಡನು. ಅವನು ಪಟವರ್ಧನ-ಮನೆತನದಲ್ಲಿ ಹುಟ್ಟಿದ ಜಗಳ

ವನ್ನು ನೊಂದಿಸಲಿಕ್ಕೆ ಯತ್ನಮಾಡಿ ಕೊಲ್ಲಾಪುರದ ಅರಸನ ಪಾರಪತ್ಯ ಮಾಡಲಿಕ್ಕೆ ಗಣಪತರಾವ ಪಾನಸೆ ಎಂಬ ದೇಶಸ್ಥ ಸರದಾರನೊಡನೆ ದಂಡನ್ನು ಕಳುಹಿದನು. ಆದರೆ ಈದಂಡಿನವರು ಕೊಲ್ಲಾಪುರದ ಅರಸನನ್ನು ಹಣ್ಣುಮಾಡುವದರೊಳಗೇ ನಾನಾನ ಅಂತವಾಯಿತು. ಮಾಘವದ್ಯದಲ್ಲಿ ಅವನಿಗೆ ಜ್ವರ ಬಂದವು; ಆಜ್ವರವು ದಿನದಿನಕ್ಕೆ ಹೆಚ್ಚಾಗಿ ಫಾಲ್ಗುಣವದ್ಯ ತೃತೀಯಾ ಗುರುವಾರ ದಿವಸ ನಡುವಿರುಳಿನಲ್ಲಿ ಅವನು ಪ್ರಾಣಬಿಟ್ಟನು (ಶಕೆ ೧೭೨೧).

ನಾನಾನು ಸತ್ತಾಗ ಅವನ ಹೆಂಡಂದಿರಾದ **ಬಗಾಬಾಯಿ** **ಜೀವುಬಾಯಿ** ಎಂಬವರಿಬ್ಬರು ಸಿದ್ಧ**ಟೋಂಕ**ವೆಂಬಲ್ಲಿ ದೇವತಾಸೇವೆಗೋಸ್ಕರ ನಿಂತಿದ್ದರು. ಅವರು ನಾನಾನ ಸಾವಿನ ಸುದ್ದಿಯನ್ನು ಕೇಳಿದ ಕೂಡಲೆ ಪುಣೆಗೆ ಬಂದರು. ಅವರೊಳಗೆ ಬಗಾಬಾಯಿಯೆಂಬವಳು ನಾನಾನು ಸತ್ತ ೧೫ನೆಯ ದಿವಸವೇ ಪ್ರಾಣಬಿಟ್ಟಳು. ಜೀವುಬಾಯಿಯು ಆಗ ೯ ವರ್ಷದ ಬಾಲೆಯಾಗಿದ್ದಳು. ಈಕೆಯನ್ನು ಶಕೆ ೧೭೨೪ರ ವರೆಗೆ ಬಾಜಿರಾಯನು ತನ್ನ ಶನಿವಾರವಾಡೆಯೆಂಬರಮನೆಯಲ್ಲಿ ಇಟ್ಟುಕೊಂಡಿದ್ದನು. ಆವರ್ಷ ಹೋಳಕರನು ಪೇಶ್ವೇನನ್ನು ಪುಣೆಯಿಂದ ಓಡಿಸಲು, ಆಕೆಯು ಲೋಹಗಡಕ್ಕೆ ಹೋದಳು. ಮುಂದೆ ಆರ್ಥರ ವೆಲಸ್ಲೆಯ ಮಧ್ಯಸ್ಥಿಕೆಯಿಂದ ಪೇಶ್ವೇನು ಆಕೆಗೆ ತಿಂಗಳಿಗೆ ೧೦೦೦ ರೂಪಾಯಿ ಜೀವನಾಂಶವನ್ನು ಕೊಡಲೊಪ್ಪಿದನು. ಮುಂದೆ ಪೇಶ್ವೇನು ತನ್ನ ರಾಜ್ಯವನ್ನು ಇಂಗ್ಲಿಷರಿಗೊಪ್ಪಿಸಿ ಬ್ರಹ್ಮಾವರ್ತಕ್ಕೆ ಹೋಗುವ ವರೆಗೆ ಆಕೆಯು ಪನವೇಲವೆಂಬಲ್ಲೇ ಇದ್ದಳು. ಶಕೆ ೧೭೪೧ರಲ್ಲಿ ಮೌಂಟಸ್ಟುವರ್ಟ ಎಲ್ಫಿನ್‌ಸ್ಟನ್ ದೊರೆಯು ಆಕೆಗೆ ಮೊದಲು ನಾನಾನಿಗೆ ನಡೆಯುತ್ತಿದ್ದ **ಮೇಣವೇಲ-ಬೇಲಬಾಗ** ಸಂಸ್ಥಾನಗಳನ್ನು ಬಿಟ್ಟುಕೊಟ್ಟನು. ಶಕೆ ೧೭೪೯ರಲ್ಲಿ ಜೀವುಬಾಯಿಗೆ ದತ್ತಕ ತೆಗೆದುಕೊಳ್ಳಲಿಕ್ಕೆ ಅಪ್ಪಣೆ ದೊರೆಯಲಿಲ್ಲ. ಮುಂದೆ ಶಕೆ ೧೭೭೫ರಲ್ಲಿ ಜೀವುಬಾಯಿಯು ತೀರಿಕೊಂಡುದರಿಂದ ಆಕೆಯ ಎರಡೂ ಸಂಸ್ಥಾನಗಳನ್ನು ಇಂಗ್ಲಿಷರು ತೆಗೆದುಕೊಂಡರು. ಬಳಿಕ ಮುಂಬಯಿಯಧಿ

ಪತಿಯಾದ ಬಾರ್ಟಲ್ ಫ್ರಿಯರ ದೊರೆಯು ಉದಾರಮನಸಿನಿಂದ ಮೇಣವೇಲಗ್ರಾಮವನ್ನು ನಾನಾನ ವಂಶಕನಾದ ಮಾಧವರಾವ ಬಲ್ಲಾಳನೆಂಬವನಿಗೆ ವಂಶಪರಂಪರ ಉಂಬಳಿಯಾಗಿ ಬಿಟ್ಟುಕೊಟ್ಟನು.

ನಾನಾಫಡನವೀಸನು ಸ್ವಭಾವದಿಂದ ಪುಕ್ಕನಾಗಿದ್ದನು. ಅವನಲ್ಲಿ ಕಲಿತನವು ಎಳ್ಳಷ್ಟಾದರೂ ಇದ್ದಿಲ್ಲ. ಫ್ರೆಂಚದಳವಾಯಿಯಾದ ಡ್ಯೂಪ್ಲೆಯಂತೆ, ಗುಂಡಿನ ಸಪ್ಪಳ ಕೇಳಿದ ಕೂಡಲೆ ಅವನ ಬುದ್ಧಿಯು ಮಸಣಿಸುತ್ತಿತ್ತು. ರಾಜತಂತ್ರಗಳಲ್ಲಿಯೂ ಜನರ ಸ್ವಭಾವ ಪರೀಕ್ಷಣದಲ್ಲಿಯೂ ಅವನು ಮೇಲೆ ಹೇಳಿದ ಫ್ರೆಂಚದಳವಾಯಿಯನ್ನು ಕೆಲಮಟ್ಟಿಗೆ ಹೋಲುತ್ತಿದ್ದನೆನ್ನಬಹುದು. ಅವನು ದೀರ್ಘೋದ್ಯೋಗಿಯೂ ನಿಯಮಿತನೂ ಮಿತಭಾಷಿಯೂ ಆಗಿದ್ದನು. ಅವನಿಗೆ ಒಣಚೇಷ್ಟೆಯೂ ಹಾಳುಹರಟೆಯೂ ಸೇರುತ್ತಿದ್ದಿಲ್ಲ. ಅವನಲ್ಲಿ ಕಲ್ಪನಾಶಕ್ತಿಯು ವಿಶೇಷವಾಗಿತ್ತು. ಅವನು ಹೆಚ್ಚು ಕಲಿತವನಾಗದಿದ್ದರೂ ಬಹುಶ್ರುತನಾಗಿದ್ದನು. ಅವನು ದೇವರು ಬ[illegible]ಹ್ಮಣರಲ್ಲಿ ವಿಶ್ವಾಸವುಳ್ಳವನಾದರೂ ವಿಷಯವಾಸನೆಗೆ ಒಳಗಾ[illegible]ದ್ದನು. ಅವನಿಗೆ ಫಲಜ್ಯೋತಿಷದಲ್ಲಿ ಪೂರ್ಣವಿಶ್ವಾಸವಿತ್ತು. ಅವನು ಕೆಲಮಟ್ಟಿಗೆ ಪರೋಪಕಾರಗುಣವುಳ್ಳವನಾದರೂ* ದ್ರವ್ಯಸಂಗ್ರಹಕ್ಕೆ ಮೆಚ್ಚಿದ್ದನು. ಆದ್ದರಿಂದ ಆಕಾಲದ ಜನರು ಅವನಿಗೆ ನವಕೋಟಿನಾರಾಯಣನೆನ್ನುತ್ತಿದ್ದರು.† ಆದರೆ ಅವನು ತನ್ನ ಹಣವನ್ನೆಲ್ಲ ತನ್ನ ಹತ್ತರ ಇಟ್ಟುಕೊಳ್ಳದೆ ಬೇರೆ ಬೇರೆ ಭಾಗದಲ್ಲಿದ್ದ

---

* ನಾನಾನು ಬೇಲಬಾಗದಲ್ಲಿ ವಿಷ್ಣುದೇವಾಲಯ, ತನ್ನ ಉಂಬಳಿ ಊರಾದ ವೇಳಾಸದಲ್ಲಿ ಕಾಳಭೈರವನ ಗುಡಿ, ಅವಡಸವೆಂಬಲ್ಲಿ ಈಶ್ವರನ ಗುಡಿ, ಮೇಣವಲದಲ್ಲಿ ಅಮೃತೇಶ್ವರನ ಗುಡಿ, ಲಕ್ಷ್ಮೀವಾಸುದೇವರ ಗುಡಿ ಮುಂತಾದ ಗುಡಿಗಳನ್ನೂ ಕೆಲವು ಪೂಲುಗಳನ್ನೂ ಕಟ್ಟಿಸಿದನು.

† ನಾನಾನಿಗೆ ವರ್ಷಕ್ಕೆ ಸುಮಾರು ೫ ಲಕ್ಷ ರೂಪಾಯಿಯ ಉತ್ಪನ್ನವಿತ್ತು, ಮತ್ತು ವೆಚ್ಚಹೋಗಿ ೧ ೧/೨ ಲಕ್ಷ ಉಳಿಯುತ್ತಿತ್ತೆಂದು ತೋರುತ್ತದೆ. ಆದರೆ ರಾಜಕಾರ್ಯದಲ್ಲಿ ಅವನಿಗೆ ಬಹಳ ಹಣ ಕಾಣಿಕೆಯಾಗಿ ಬರುತ್ತಿತ್ತು. ಹೈದರಅಲ್ಲಿಯೇ ಒಂದು ಒಪ್ಪಂದದಲ್ಲಿ ೧ ಲಕ್ಷ ಹೊನ್ನು ಕೊಟ್ಟನಂತೆ.

ತನ್ನ ನಂಬಿಗಸ್ಥರಾದ ಸಾವುಕಾರರ ಬಳಿಯಲ್ಲಿಟ್ಟಿದ್ದನು. ಆದ್ದರಿಂದ ಅವನನ್ನು ಸೆರೆ ಹಿಡಿದಾಗ ಅಥವಾ ಅವನು ಸತ್ತ ಬಳಿಕ ಶಿಂದೇ-ಪೇಶ್ವೇರಿಗೆ ಅವನ ಮನೆಯಲ್ಲಿ ಒಂದು ಕಾಸಾದರೂ ದೊರೆಯಲಿಲ್ಲ. ಅವನಿಗೆ ಒಟ್ಟು ೯ ಮಂದಿ ಹೆಂಡಂದಿರಾದರು. ಅವರೊಳಗೆ ೭ ಮಂದಿ ಅವನು ಇರುವಾಗಲೆ ತೀರಿಕೊಂಡರು. ಈಯೇಳು ಜನರಲ್ಲಿ ೩ ಮಂದಿ ಮಾತ್ರ ಹಡೆದರು, ಮತ್ತು ಆಕೂಸುಗಳು ಚಿಕ್ಕಂದಿನಲ್ಲೇ ಸತ್ತವು. ಆದ್ದರಿಂದ ನಾನಾನಿಗೆ ಗೃಹಸೌಖ್ಯವು ಏನೂ ಇದ್ದಿಲ್ಲೆನ್ನಬಹುದು. ವಿಷಯವಾಸನೆಯೆಂಬ ದುರ್ಗುಣದ ಹೊರತು ನಾನಾನಲ್ಲಿ ಪರೋತ್ಕರ್ಷದ ಅಸಹನತೆಯೆಂಬ ದುರ್ಗುಣವಿತ್ತೆಂದು ಸರಂಜಾಮಿಯೆಂಬವರು "ಶಿಂದೇ ಮನೆತನದ ಇತಿಹಾಸ" ಎಂಬ ತಮ್ಮ ಗ್ರಂಥದಲ್ಲಿ ಬರೆಯುತ್ತಾರೆ. ಆದರೆ ಈದುರ್ಗುಣವು ಅವನಲ್ಲಿದ್ದಿಲ್ಲವೆಂದು ಬೇರೆ ಕೆಲಗ್ರಂಥಕಾರರು ಪ್ರತಿಪಾದಿಸುತ್ತಾರೆ. ಅದು ಹೇಗೇ ಇರಲಿ, ಅವನು ಈಭರತಖಂಡದಲ್ಲಿ ಹಿಂದೆ ಆಗಿ ಹೋದ ರಾಜಕಾರ್ಯಧುರಂಧರರಲ್ಲಿ ಒಬ್ಬನಾಗಿದ್ದನೆನ್ನಲಿಕ್ಕೆ ಏನೂ ಬಾಧ್ಯವಿಲ್ಲ.

Printed at the Basel Mission Press, Mangalore.